ಬಳ್ಳಾರಿ । ವಿಜಯನಗರ । ಕೊಪ್ಪಳ । ಬೆಂಗಳೂರು । ದಾವಣಗೆರೆ । ಹುಬ್ಬಳ್ಳಿ-ಧಾರವಾಡ । ಹಾವೇರಿ । ಗದಗ । ಬಾಗಲಕೋಟೆ । ವಿಜಯಪುರ । ಕಲಬುರಗಿ । ತುಮಕೂರು

# ಅನಂತ ಜನಶಕ್ತಿ

ಸಂಪಾದಕ: ಎಸ್.ವೆಂಕಟೇಸುಲು

EDITOR : S VENKATESULU

ANANTHA JANA SAKTHI KANNADA DAILY ಕನ್ನಡ ದಿನಪತ್ರಿಕೆ

ಸಂಪುಟ : 01 ಸಂಚಿಕೆ : 27 ರಿ.ನಂ : ಕೆಎನ್‌ಎಎನ್ / 26 / ಎ5487 ಬಳ್ಳಾರಿ ಸೋಮವಾರ ದಿನಾಂಕ : 03-08-2026 ಪುಟ : 04 ಬೆಲೆ : 2-00

## ಸಿಡಿಲು ಬಡಿದು ಐವರು ಮಹಿಳೆಯರು ಸಾವು, ನಾಲ್ವರಿಗೆ ಗಂಭೀರ ಗಾಯ!

ಜಾರ್ಖಂಡ್‌ನ ರಾಮಗಢ ಮತ್ತು ಗೊಡ್ಡಾ ಜಿಲ್ಲೆಗಳಲ್ಲಿ ಭಾನುವಾರ ಸಿಡಿಲು ಬಡಿದು ಐವರು ಮಹಿಳೆಯರು ಸಾವನ್ನಪ್ಪಿದ್ದು, ನಾಲ್ವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಮಗಢ ಜಿಲ್ಲೆಯ ಪತ್ರಾತು ಬ್ಲಾಕ್‌ನಲ್ಲಿ ಮೂವರು ಸಾವನ್ನಪ್ಪಿದ್ದರೆ, ಗೊಡ್ಡಾ ಜಿಲ್ಲೆಯ ಬಸಂತ್ರೈ ಬ್ಲಾಕ್‌ನ ಮಹೇಶ್‌ಪುರ-ರಾಂಪುರ್ ಗ್ರಾಮದಲ್ಲಿ ಇಬ್ಬರು ಮಹಿಳೆಯರು ಸಾವನ್ನಪ್ಪಿದ್ದಾರೆ. ಪೊಲೀಸರ ಪ್ರಕಾರ, ಎಲ್ಲಾ ಬಲಿಪಶುಗಳು ಕೃಷಿ ಹೊಲಗಳಲ್ಲಿ ಭತ್ತದ ಪೈರು ಬಿತ್ತುತ್ತಿದ್ದಾಗ ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ.

ರಾಮಗಢದ ಎರಡು ಗ್ರಾಮಗಳಲ್ಲಿ ಸಿಡಿಲು ಬಡಿದು ಮೂವರು ಮಹಿಳೆಯರು ಸಾವನ್ನಪ್ಪಿದ್ದಾರೆ. ಅವರನ್ನು ಸಕುಲ್ ಗ್ರಾಮದ ರೇಖಾ ದೇವಿ (45) ಮತ್ತು ರೋಶ್ನಿ ಕುಮಾರಿ (21) ಮತ್ತು ಪಳನಿ ಗ್ರಾಮದ ನಿವಾಸಿ ಸುಶಾಂತಿ ದೇವಿ (34) ಎಂದು ಗುರುತಿಸಲಾಗಿದೆ ಎಂದು ಪತ್ರಾತು ಪೊಲೀಸ್ ಠಾಣಾಧಿಕಾರಿ ಶಿವಲಾಲ್ ಕುಮಾರ್ ಗುಪ್ತಾ ತಿಳಿಸಿದ್ದಾರೆ. ಗೊಡ್ಡಾದಲ್ಲಿ, ಸಿಡಿಲು ಬಡಿದು ಇಬ್ಬರು ಮಹಿಳೆಯರು ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ, ಅವರ ಗುರುತು ಇನ್ನೂ ಪತ್ತೆಯಾಗಿಲ್ಲ.



# ಕಾವೇರಿ ಕಿಚ್ಚು: 'ಭೂಮಿ-ನೀರು-ಭಾಷೆ ವಿಚಾರ'

## ಕರ್ನಾಟಕ ಒಂದಾಗಬೇಕು : ಮಾಜಿ ಸಿಎಂ ಸಿದ್ದರಾಮಯ್ಯ ಸಲಹೆ

### 'ಕರ್ನಾಟಕದ ರೈತರ ಹಿತ ರಕ್ಷಣೆಗೆ ಸರ್ಕಾರ ಬದ್ಧ' : ಡಿಕೆಶಿ

ತಾನೂ ಕಾವೇರಿ ಜಲಾನಯನ ಪ್ರದೇಶದವನೇ ಆಗಿದ್ದು, ರೈತನ ಮಗ ಎಂದು ಹೇಳಿದ ಡಿ.ಕೆ. ಶಿವಕುಮಾರ್, ರಾಜ್ಯದ 7.5 ಕೋಟಿ ಜನರಿಗೆ ಸರ್ಕಾರದ ಬದ್ಧತೆಯ ಬಗ್ಗೆ ಯಾವುದೇ ಅನುಮಾನ ಇರಬಾರದು ಎಂದರು.

ಬೆಂಗಳೂರಿನ ತಮ್ಮ ಗೃಹ ಕಚೇರಿ 'ಕೃಷ್ಣಾ'ದಲ್ಲಿ ನಡೆದ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಎಂ. ವೀರಪ್ಪ ಮೊಯ್ಲಿ, ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಡಿ.ವಿ. ಸದಾನಂದ ಗೌಡ ಹಾಗೂ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ನಾಯಕರು ಭಾಗವಹಿಸಿದ್ದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡಿಕೆಶಿ, ರಾಜ್ಯದ ಹಿತಾಸಕ್ತಿಗೆ ಧಕ್ಕೆ ಬಂದಾಗ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗಟ್ಟಾಗಿ ನಿಲ್ಲುವ ಪರಂಪರೆ ಕರ್ನಾಟಕಕ್ಕಿದೆ ಎಂದು ಹೇಳಿದರು.



ಬೆಂಗಳೂರು: ರಾಜ್ಯದ ಭೂಮಿ, ನೀರು ಮತ್ತು ಭಾಷೆಗೆ ಸಂಬಂಧಿಸಿದ ವಿಚಾರಗಳು ಎದುರಾದಾಗ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಕರ್ನಾಟಕದ ಹಿತಕ್ಕಾಗಿ ಎಲ್ಲರೂ ಒಗ್ಗಟ್ಟಾಗಿ ನಿಲ್ಲುವುದು ರಾಜ್ಯದ ರಾಜಕೀಯ ಪರಂಪರೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಕಾವೇರಿ ನದಿ ನೀರು ಹಂಚಿಕೆ ವಿಚಾರವಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸರ್ವಪಕ್ಷ ನಾಯಕರ ಸಭೆಯಲ್ಲಿ ಭಾಗವಹಿಸಿದ ಸಿದ್ದರಾಮಯ್ಯ, ಸಭೆಯಲ್ಲಿ ಕೆಲವು ಸಲಹೆಗಳನ್ನು ನೀಡಿರುವುದಾಗಿ ತಿಳಿಸಿದ್ದಾರೆ.

ಸಭೆಯ ಬಳಿಕ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, "ಭೂಮಿ-ನೀರು-ಭಾಷೆಯ ಪ್ರಶ್ನೆ ಎದುರಾದಾಗ ಪಕ್ಷಭೇದಗಳನ್ನು ಬದಿಗಿಟ್ಟು ರಾಜ್ಯದ ಹಿತಕ್ಕಾಗಿ ಒಗ್ಗಟ್ಟಾಗಿ ನಿಲ್ಲುವುದು ಕರ್ನಾಟಕದ ರಾಜಕೀಯ ಪರಂಪರೆ" ಎಂದು ಹೇಳಿದ್ದಾರೆ.

ಹಿಂದೆಯೂ ವಿವಿಧ ರಾಜಕೀಯ ಪಕ್ಷಗಳ ಸರ್ಕಾರಗಳು ಇಂತಹ ಹಲವು ಗಂಭೀರ ಸನ್ನಿವೇಶಗಳನ್ನು ಎದುರಿಸಿವೆ.

2ನೇ ಪುಟಕ್ಕೆ..

## ಕಾವೇರಿ ವಿಚಾರದಲ್ಲಿ ರಾಜಿ ಮಾತೇ ಇಲ್ಲ; ಸರ್ವಪಕ್ಷ ಸಭೆಯಲ್ಲಿ 'ಒಗ್ಗಟ್ಟಿನ ಮಂತ್ರ':

# ರೈತರ ಹಿತವೇ ರಾಜಕೀಯಕ್ಕಿಂತ ಮೇಲು : ಡಿಕೆಶಿ

ಬೆಂಗಳೂರು: ಕಾವೇರಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಹಿತಾಸಕ್ತಿಯನ್ನು ರಕ್ಷಿಸಲು ಎಲ್ಲ ರಾಜಕೀಯ ಪಕ್ಷಗಳು ಒಗ್ಗಟ್ಟಾಗಿ ನಿಲ್ಲಲು ನಿರ್ಧರಿಸಿವೆ.

ರೈತರು ಹಾಗೂ ರಾಜ್ಯದ ಕುಡಿಯುವ ನೀರಿನ ಅಗತ್ಯಗಳಿಗೆ ರಾಜಕೀಯ ಭಿನ್ನಾಭಿಪ್ರಾಯಗಳಿಗಿಂತ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಭಾನುವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸರ್ವಪಕ್ಷ ಸಭೆಯಲ್ಲಿ ಒಮ್ಮತ ಮೂಡಿದೆ.

ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಡಿ.ಕೆ. ಶಿವಕುಮಾರ್, ಕಾನೂನು ಚೌಕಟ್ಟಿನೊಳಗೇ ರಾಜ್ಯದ ಹಿತಾಸಕ್ತಿಯನ್ನು ರಕ್ಷಿಸಲು ಸರ್ಕಾರ ಬದ್ಧವಾಗಿದೆ ಎಂದು ಸ್ಪಷ್ಟಪಡಿಸಿದರು. ಉತ್ತಮ ಮಳೆಯಾಗಿರುವ ಹಿನ್ನೆಲೆಯಲ್ಲಿ ಸದ್ಯದ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ.

ಹೀಗಾಗಿ ಆಗಸ್ಟ್ 13ರಂದು ಕರೆ ನೀಡಿರುವ ಕರ್ನಾಟಕ ಬಂದ್‌ನ್ನು ಕೈಬಿಡುವಂತೆ ಕನ್ನಡ ಪರ ಸಂಘಟನೆಗಳಿಗೆ ಅವರು ಮನವಿ ಮಾಡಿದರು.



ಸರ್ವಪಕ್ಷ ಸಭೆಯಲ್ಲೂ ಸರ್ಕಾರದ ನಿಲುವಿಗೆ ಎಲ್ಲ ಪಕ್ಷಗಳು ಬೆಂಬಲ ವ್ಯಕ್ತಪಡಿಸಿವೆ ಎಂದು ಹೇಳಿದರು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ಎತ್ತಿಹಿಡಿದು ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿದಿನ 3,500 ಕ್ಯೂಸೆಕ್ ನೀರು ಹರಿಸುವಂತೆ ಕರ್ನಾಟಕಕ್ಕೆ ಸೂಚಿಸಿದೆ. ಇದನ್ನು ವಿರೋಧಿಸಿ ಕನ್ನಡ ಪರ ಸಂಘಟನೆಗಳು ಆಗಸ್ಟ್ 13ರಂದು ಕರ್ನಾಟಕ ಬಂದ್‌ಗೆ ಕರೆ ನೀಡಿವೆ. "ರಾಜಕೀಯಕ್ಕಿಂತ ರಾಜ್ಯದ ರೈತರು ಮತ್ತು ಜನರ ಹಿತಾಸಕ್ತಿಯೇ ಮುಖ್ಯ" ಎಂದು ಅವರು ಪ್ರತಿಪಾದಿಸಿದರು. ಕಾವೇರಿ ವಿಚಾರದಲ್ಲಿ ಕರ್ನಾಟಕದ ನಿಲುವನ್ನು ಪುನರುಚ್ಚರಿಸಿದ ಅವರು, ಕುಡಿಯುವ ನೀರಿಗೆ ಅತ್ಯುನ್ನತ ಆದ್ಯತೆ ನೀಡುವುದು

2ನೇ ಪುಟಕ್ಕೆ..

## 'ಭಾರತವನ್ನು ಟಾರ್ಗೆಟ್ ಮಾಡಲು ಶತ್ರು ರಾಷ್ಟ್ರಗಳ ಅಸ್ತ್ರ ಡ್ರಗ್ಸ್' ಕ್ಷಣಿಕ ಸುಖಕ್ಕೆ ಜೀವನ ನಾಶ ಮಾಡಿಕೊಳ್ಳಬೇಡಿ

# ಪ್ರಧಾನಿ ಮೋದಿ ಎಚ್ಚರಿಕೆ



ನವದೆಹಲಿ: ಮಾದಕ ವಸ್ತುಗಳ ಬಳಕೆ ದೇಶದ ಯುವಜನತೆಯ ಭವಿಷ್ಯಕ್ಕೆ ದೊಡ್ಡ ಅಪಾಯವಾಗಿದ್ದು, ಶತ್ರು ರಾಷ್ಟ್ರಗಳು ಯುವಕರನ್ನು ಗುರಿಯಾಗಿಸಲು ಡ್ರಗ್ಸ್ ಪೂರೈಕೆಯನ್ನು ತಮ್ಮ ಭಯೋತ್ಪಾದಕ ಯೋಜನೆಗಳ ಭಾಗವಾಗಿ ಬಳಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಎಚ್ಚರಿಸಿದ್ದಾರೆ.

ಭಾನುವಾರ 'ನಶಾ ಮುಕ್ತ ಯುವ ಫಾರ್ ವಿಕಸಿತ ಭಾರತ ಸಂಕಲ್ಪ ಅಭಿಯಾನ'ಕ್ಕೆ ಚಾಲನೆ ನೀಡಿ ಮಾತನಾಡಿದ ಪ್ರಧಾನಿ ಮೋದಿ, ದೇಶದ ಯುವಕರು ಮಾದಕ ವ್ಯಸನದಿಂದ ದೂರವಿರುವ ಸಂಕಲ್ಪ ಮಾಡಬೇಕು. ಡ್ರಗ್ಸ್ ನಿಮಗೆ ಕೆಲಕಾಲ 'ಸುಖ' ನೀಡಬಹುದು. ಆದರೆ ಅದು ನಿಮ್ಮ ಇಡೀ ವೃತ್ತಿಜೀವನ ಮತ್ತು ವೈಯಕ್ತಿಕ ಬದುಕನ್ನು 'ಹಾಳು' ಮಾಡಿಬಿಡುತ್ತದೆ ಎಂದು ಕರೆ ನೀಡಿದರು. ದೇಶದ ಯುವಜನತೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗಿರುವುದು ಅತ್ಯಂತ ಅಗತ್ಯ ಎಂದು ಪ್ರಧಾನಿ ಹೇಳಿದರು. ಯುವಕರು ಎಲ್ಲ ರೀತಿಯ

2ನೇ ಪುಟಕ್ಕೆ..

# ಪೊಲೀಸ್ ಕಾನ್ಸ್ಟೇಬಲ್ ನೇಮಕಾತಿ ಪರೀಕ್ಷೆ

## 10472 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರು: ಡಿಸಿ



ದಾವಣಗೆರೆ : ಜಿಲ್ಲೆಯಲ್ಲಿ ಪೊಲೀಸ್ ಕಾನ್ಸ್ಟೇಬಲ್ ನೇಮಕಾತಿ ಪರೀಕ್ಷೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರಿಂದ ಅತ್ಯಂತ ಪಾರದರ್ಶಕವಾಗಿ ಹಾಗೂ ಸಿಸಿಟಿವಿ ಕಣ್ಗಾವಲಿನಲ್ಲಿ ಯಾವುದೇ ಅವ್ಯವಹಾರಕ್ಕೆ ಆಸ್ಪದವಿಲ್ಲದೆ ಸುಗಮವಾಗಿ ನಡೆದಿದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ ಅವರು ತಿಳಿಸಿದರು.

ಜಿಲ್ಲೆಯ ಒಟ್ಟು 19 ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲಿನಲ್ಲಿ ಪರೀಕ್ಷೆ ನಡೆಯಿತು, ಪರೀಕ್ಷೆಗೆ 11,031 ಅಭ್ಯರ್ಥಿಗಳು ಪರೀ-ಕ್ಷೆಗೆ ನೊಂದಾಯಿಸಿಕೊಂಡಿದ್ದು, 10,472 ಜನ ಪರೀಕ್ಷೆಗೆ ಹಾಜರಾಗಿ, 559 ಜನ ಗೈರು ಹಾಜರಾಗಿದ್ದಾರೆ , ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ,

2ನೇ ಪುಟಕ್ಕೆ..

# ಮಾಯಕೊಂಡ ಕೆರೆಗೆ ಭೇಟಿ ಕೆರೆ ಸಮಿತಿ ರಚಿಸಿ, ಕೆರೆ ಸಂರಕ್ಷಿಸಿ; ಜಿಲ್ಲಾಧಿಕಾರಿ

ಮಾಯಕೊಂಡ: ಮಾಯಕೊಂಡ ಸಮೀಪದ ಹೊಸಕೆರೆ ಮತ್ತು ಕೆಂಚಾಲಪ್ಪನ ಕೆರೆಗಳಿಗೆ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯ ನೀರು ಪೂರೈಕೆ ದೋಷ ಸರಿಪಡಿಸಲು, ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.

ರೈತ ಸಂಘದ ಅಧ್ಯಕ್ಷ ಹುಚ್ಚವನಹಳ್ಳಿ, ಮಂಜುನಾಥ್ ಮತ್ತು ರೈತರು ಮಾತನಾಡಿ, ಸಾಸಲು ಗುಡ್ಡದಿಂದ ನಮ್ಮ ಭಾಗದ ಕೆರೆಗಳಿಗೆ ನೀರು ಪೂರೈಕೆ ಆಗುವುದಿಲ್ಲ. ಇವು ಠೇಯ್ಲಾಂಡ (ಕೊನೆಯ ಭಾಗದ) ಕೆರೆಗಳಾಗುತ್ತವೆ. ರಾಂಪುರ ಅಥವಾ ಅಂದನೂರು ಕೆರೆಗಳನ್ನು ಪರ್ಯಾಯ ಕೆರೆಗಳನ್ನಾಗಿ ಮಾಡಿ, ನೀರು ತುಂಬಿಸಿ, ಜಾಕ್ವೆಲ್ ಅಳವಡಿಸಿ ಅಲ್ಲಿಂದ ಕೆಳಭಾಗದ ಕೆರೆಗಳಿಗೆ ನೀರು ಹರಿಸಿದರೆ ಸಮಸ್ಯೆ ನೀಗುತ್ತದೆ ಎಂದು ಜಿಲ್ಲಾಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟರು.

ಕೆಲವರು ಪದೇ ಪದೇ ಪೈಪ್ ಲೈನ್ ಒಡೆಯುತ್ತಿವೆ, ಯಾರೂ ಸ್ಪಂದಿಸುವುದಿಲ್ಲ ಎಂದಾಗ ಯೋಜನೆಯ ಎಕ್ಸಿಕ್ಯುಟಿವ್ ಎಂಜಿನಿಯರ್ ಕೃಷ್ಣಪ್ರಸಾದ್ ರೈತರು ವಾಲ್ವ್ ಗಳನ್ನು ತಮ್ಮಷ್ಟಕ್ಕೆ ಮನ ಬಂದಂತೆ ತಿರುವಲು ಯತ್ನಿಸಿ ಇಂಥ ಸಮಸ್ಯೆಯಾಗಿದೆ ಎಂದರು. ರೈತ ಮುಖಂಡರು ಕೆರೆ ಒತ್ತುವರಿಯಾಗಿರುವುದನ್ನು ಗಮನಕ್ಕೆ



ತಂದಾಗ ಜಿಲ್ಲಾಧಿಕಾರಿ, ಕೆರೆ ಸರ್ವೆ ಮಾಡಿ ಒತ್ತುವರಿದಾರರನ್ನು ಹೊರಹಾಲಾಗುತ್ತದೆ. ಆದ-ರೆ ಗ್ರಾಮಸ್ಥರೂ ಆಸಕ್ತಿ ತೋರಿಸಿ, ಒತ್ತುವರಿ ತೆರವುಗೊಳಿಸಲು ಯತ್ನಿಸಬೇಕು. ಕೆರೆ ರಕ್ಷಣೆಗೆ ಸಮಿತಿ ರಚಿಸಿಕೊಂಡು ಕೆರೆಗಳ ಒತ್ತುವರಿ ತಡೆಗೆ, ಪೈಪ್ ಲೈನ್ ದುರಸ್ತಿಗೆ ಮುಂದಾಗಬೇಕು, ಎಂದು ಸಲಹೆ ಮಾಡಿದರು. ಬಲ್ಲೂರು ರವಿಕುಮಾರ್, ರೈತರು ಸ್ವಯಿಚ್ಚೆಯಿಂದ ಕೆರೆ ಒತ್ತುವರಿ ತೆರವುಗೊಳಿಸೊದರೆ ಅಂಥವರನ್ನು ನಮ್ಮ ಸಂಘಟನೆಯು ಸನ್ಮಾನಿಸುತ್ತದೆ. ಕೆರೆ ಸಮಿತಿಗಳು ರೈತರ ಮನವೊಲಿಸುವ ಕೆಲಸ ಮಾಡಬೇಕು ಎಂದರು. ಗಂಗಾಧರ, ನಟರಾಜ್ ಮತ್ತಿತರರು, ಕೆರೆಗಳಿಗೆ ಹೋಗುವ ರಸ್ತೆಗಳು ಬಹಳ ಹಾಳಾಗಿವೆ, ಶಾಸಕರ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ, ದಯವಿಟ್ಟು ರಸ್ತೆ ವ್ಯವಸ್ಥೆ ಮಾಡಿ ಎಂದರು.

ಬುಳ್ಳಾಪುರದ ಹಟ್ಟಿ ಮಹಿಳೆತೊಬ್ಬರು ನಮ್ಮ ಅಡಿಕೆ ಮರಗಳನ್ನು ಯಾರೋ ಕಡಿದು ಹಾಕಿ, ಅವರ ಮೇಲೆ ಕೇಸ್ ಆಗಿದೆ, ನಮಗೆ ಪರಿಹಾರ ಕೊಡಿಸಿ ಎಂದು ಕಣ್ಣೀರಿಟ್ಟರು. ಮಾಯಕೊಂಡ ಹರಿಜನ ಕಾಲೋನಿಯ ಮಹಿಳೆಯೊಬ್ಬರು ನಮಗೆ ಪಡಿತರ ಚೀಟಿ ಕೊಡಿಸಿ ಕೊಡಿ ಎಂದು ಮನವಿ

2ನೇ ಪುಟಕ್ಕೆ..

# ಮಾಜಿ ಶಾಸಕ ಭೀಮಾ ನಾಯ್ಕ್ ಸೋಲು: ಹಿರಿಯ ಕಾಂಗ್ರೆಸ್ ಕಾರ್ಯಕರ್ತರ ತೀವ್ರ ಆಕ್ರೋಶ



ಕೊಟ್ಟೂರು: "ಮಾಜಿ ಶಾಸಕ ಭೀಮಾ ನಾಯ್ಕ್ ಅವರ ಏಕಪಕ್ಷೀಯ ನಿರ್ಧಾರ ಹಾಗೂ ಪಕ್ಷದ ಹಿರಿಯ ಕಾರ್ಯಕರ್ತರನ್ನು ನಿರಂತರವಾಗಿ ಕಡೆಗಣಿಸಿದ್ದೇ ಹಗರಿಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋಲಿಗೆ ಪ್ರಮುಖ ಕಾರಣ ಎಂದು ಕಾಂಗ್ರೆಸ್ ವಿಜಯನಗರ ಜಿಲ್ಲಾ ಉಪಾಧ್ಯಕ್ಷ ಪಿ.ಎಚ್. ದೊಡ್ಡ ರಾಮಣ್ಣ ತೀವ್ರ ವಾಗ್ದಾಳಿ ನಡೆಸಿದರು.

ಕೊಟ್ಟೂರಿನ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಹಗರಿಬೊಮ್ಮನಹಳ್ಳಿ, ಕೊಟ್ಟೂರು ಹಾಗೂ ಮರಿಯಮ್ಮನಹಳ್ಳಿ ಭಾಗದ ಹಿರಿಯ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಭೀಮಾ ನಾಯ್ಕ್ ವಿರುದ್ಧ ಅಸಮಾಧಾನ ಹೊರ ಹಾಕಿದರು.

ಜುಲೈ 30 ರಂದು ಹಗರಿಬೊಮ್ಮನಹಳ್ಳಿಯ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ, ಎಐಸಿಸಿ ಕಾರ್ಯದರ್ಶಿ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಹರಕಲ್ ವೇಣುಗೋಪಾಲ್ ರಾವ್ ಸಮ್ಮುಖದಲ್ಲಿ ಜಿಲ್ಲಾಧ್ಯಕ್ಷ ಸ್ಥಾನದ ಅರ್ಜಿ ಸ್ವೀಕಾರ ಹಾಗೂ 'ಸಂಘಟನೆ ಸೃಜನ್ ಅಭಿಯಾನ' ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಭೀಮಾ ನಾಯ್ಕ್ ಮನೆಗೆ ಬಂದವರಿಗೆ ಮಾತ್ರ ಒಳಗಡೆ ಪ್ರವೇಶ ಎಂದು ಮೈಕ್‌ನಲ್ಲಿ ಬಹಿರಂಗವಾಗಿ ಅನೌನ್ಸ್ ಮಾಡುವ ಮೂಲಕ 40 ವರ್ಷಗಳಿಂದ ಪಕ್ಷಕ್ಕಾಗಿ ದುಡಿದ ಹಿರಿಯ ನಾಯಕರಿಗೆ ತೀವ್ರ ಅವಮಾನ ಮಾಡಿದರು ಎಂದು ನಾಯಕರು ಬೇಸರ ವ್ಯಕ್ತಪಡಿಸಿದರು.

ಅಧಿಕಾರ ದುರ್ಬಳಕೆ & ಏಕಪಕ್ಷೀಯ ನಿರ್ಧಾರ: ಮಾಜಿ ಸಿಎಂ ಸಿದ್ದರಾಮಯ್ಯ ಹೆಸರು ಹೇಳಿಕೊಂಡು, ಹಗರಿಬೊಮ್ಮನಹಳ್ಳಿಯ ವಿಧಾನಸಭಾ ಕ್ಷೇತ್ರದಲ್ಲಿ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಕೊಟ್ಟೂರು ಎಪಿಎಂಸಿ ನಾಮನಿರ್ದೇಶಿತ ಸದಸ್ಯರ ನೇಮಕ ಸೇರಿದಂತೆ ಪ್ರತಿಯೊಂದರಲ್ಲೂ ಏಕಪಕ್ಷೀಯವಾಗಿ ನಡೆದು–ಕೊಂಡಿದ್ದಾರೆ.

ತುಂಗಭದ್ರಾದಿಂದ 74 ಕೆರೆ ತುಂಬಿಸುವ ಯೋಜನೆಯಲ್ಲಿ ಕೊಟ್ಟೂರು ಮೂಲಕ ಕೂಡ್ಲಿ–ಗಿಗೆ ಪೈಪ್‌ಲೈನ್ ಹೋಗುತ್ತಿದ್ದರೂ ನಿರ್ಲಕ್ಷ್ಯ ವಹಿಸಿದರು. 5000 ಕೋಟಿಯ ಚಿಲವಾರ ಬಂಡಿ ಏತ ನೀರಾವರಿ ಯೋಜನೆ 6 ವರ್ಷಗಳಿಂದ ನೆನೆಗುದಿಗೆ ಬೀಳಲು ಹಾಗೂ ಕೊಟ್ಟೂರು ಡಿಗ್ರಿ ಕಾಲೇಜು ಕೈ ತಪ್ಪಿ ಹೋಗಲು ಇವರೇ ಕಾರಣ ಎಂದು ವಿಷಾದ ವ್ಯಕ್ತಪಡಿಸಿದರು.

ಕುರುಬ ಸಮುದಾಯದ ಜಾಗ ಅತಿಕ್ರಮಣ: ಕ್ಷೇತ್ರದಲ್ಲಿ ಕುರುಬ ಸಮುದಾಯಕ್ಕೆ ಸೇರಿದ ಜಾಗವನ್ನು ಅಕ್ರಮವಾಗಿ ಪಡೆದುಕೊಂಡಿದ್ದು, 2023ರ ಚುನಾವಣೆಯಲ್ಲಿ ಈ ಸಮುದಾಯ ಭೀಮಾ ನಾಯ್ಕ್ ಅವರಿಗೆ ತಕ್ಕ ಪಾಠ ಕಲಿಸಿದೆ.

ಅಕ್ರಮ ಚಟುವಟಿಕೆಗೆ ಪ್ರೋತ್ಸಾಹ: ಕ್ಷೇತ್ರದಲ್ಲಿ ಮರಳು ದಂದೆ, ಐಪಿಎಲ್ ಬೆಟ್ಟಿಂಗ್ ಹಾಗೂ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ತಮ್ಮ ಹಿಂಬಾಲಕರಿಗೆ ಭೀಮಾ ನಾಯ್ಕ್ ಕುಮ್ಮಕ್ಕು ನೀಡುತ್ತಿದ್ದಾರೆ. ಯಾವುದೇ ಇಲಾಖೆಯ ಅಧಿಕಾರಿಗಳು ಕ್ಷೇತ್ರದಲ್ಲಿ ಕೆಲಸ ಮಾಡಬೇಕೆಂದರೆ ಇವರ ಮರ್ಜಿಯಲ್ಲೇ ನಡೆಯಬೇಕಾದ ವಾತಾವರಣ ನಿರ್ಮಿಸಿದ್ದಾರೆ.

ಉಸ್ತುವಾರಿ ಸಚಿವರ ಸಮ್ಮುಖದಲ್ಲೇ ಗೂಂಡಾಗಿರಿ: ಜಮೀರ್ ಅಹ್ಮದ್ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ, ಬೆಂಬಲಿಕರನ್ನು ಕಟ್ಟಿಕೊಂಡು ಜಿಲ್ಲಾಧ್ಯಕ್ಷ ಸಿರಾಜ್ ಶೇಕ್ ವಿರುದ್ಧ ಧಿಕ್ಕಾರ ಕೂಗಿಸಿ ಪಕ್ಷದ ಶಿಸ್ತು ಮುರಿದರು

# ಡಿಕೆಎಸ್ ಚಾರಿಟಬಲ್ ಟ್ರಸ್ಟ್‌ನಿಂದ ವಿದ್ಯಾರ್ಥಿಗಳಿಗೆ 1 ಕೋಟಿ ವೆಚ್ಚದಲ್ಲಿ 200 ಲ್ಯಾಪ್‌ಟಾಪ್ ವಿತರಣೆ

ಕುಣಿಗಲ್: ತಾಲೂಕಿನ ಪಿಯುಸಿ ಉತ್ತೀರ್ಣರಾದ ಅರ್ಹ ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವ ಉದ್ದೇಶದಿಂದ ಡಿಕೆಎಸ್ ಚಾರಿಟಬಲ್ ವತಿಯಿಂದ ದಿವಂಗತ . ದೊಡ್ಡಯ್ಯನವರ ಸ್ಮರಣಾರ್ಥ 1 ಕೋಟಿ ರೂ. ವೆಚ್ಚದಲ್ಲಿ 200 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಗುವುದು ಎಂದು ಶಾಸಕ ಡಾ.ರಂಗನಾಥ ತಿಳಿಸಿದರು. ಲೋಕೋಪಯೋಗಿ ಅನುದಾನದಡಿ ತಾಲೂಕಿನ ಎಡಿಯೂರು ಹೋಬಳಿ ಜಡ್ಡಿಗೆರೆ ಗ್ರಾಮದಿಂದ ಹೆಡ್ಡಿಗೆರೆ ಗ್ರಾಮದವರಗೆ 3 ಕೋಟಿ ರೂ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ತಮ್ಮ ತಂದೆ ದಿವಂಗತ ಡಾ.ದೊಡ್ಡಯ್ಯನವರು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ದೊರೆಯುವ ಶೈಕ್ಷಣಿಕ ಸೌಲಭ್ಯಗಳು ಲಭ್ಯವಾದರೆ, ಅವರು ಕೂಡ ಉತ್ತಮವಾಗಿ ಸ್ಪರ್ಧಿಸಲು ಸಾಧ್ಯವಾಗುತ್ತದೆ ಎಂಬ ಆಶಯ ಹೊಂದಿದ್ದರು. ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದರು.

ಕಳೆದ ಸಾಲಿನಲ್ಲಿ ತಾಲೂಕಿನ ವಿದ್ಯಾರ್ಥಿಗಳಿಗಾಗಿ ಸಿಇಟಿ ಮತ್ತು ನೀಟ್ ಪರೀಕ್ಷೆಗಳಿಗೆ ವಿಶೇಷ ತರಬೇತಿ ಶಿಬಿರಗಳನ್ನು ಆಯೋಜಿಸಲಾಗಿತ್ತು. ನೆರವೇರಿಸಿ ಮಾತನಾಡಿದರು.

ಸಿಇಟಿ, ನೀಟ್‌ನಲ್ಲಿ ಉತ್ತಮ ಸಾಧನೆ: ನನ್ನ ತಂದೆ ದಿ.ಡಾ. ದೊಡ್ಡಯ್ಯ ಅವರು ಗ್ರಾಮೀಣ ವಿದ್ಯಾರ್ಥಿಗಳು ಜಾಗತಿಕ ಸ್ಪರ್ಧಾತ್ಮಕ ಶಿಕ್ಷಣದಲ್ಲಿ ನಗರ ಪ್ರದೇಶದ ಮಕ್ಕಳಂತೆ ಉತ್ತಮ ವಿದ್ಯಾ ಭ್ಯಾಸ ಮಾಡಬೇಕೆಂಬ ಕನಸ್ಸು ಇಟ್ಟುಕೊಂಡಿದ್ದರು. ಈ ಕನಸನ್ನು ಸಾಕಾರಗೊಳಿಸಲು ತಿಳಿಸಿದ್ದರು. ಹೀಗಾಗಿ ಅವರ ಆಸೆಯಂತೆ ಅವರ ಸ್ಮರಣಾರ್ಥ ಪಟ್ಟಣದ ಮಹಾತ್ಮಗಾಂಧಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನುರಿತ ಉಪ ನ್ಯಾಸಕರಿಂದ 175 ವಿದ್ಯಾರ್ಥಿಗಳಿಗೆ ಉಚಿತ ನೀಟ್, ಸಿಇಟಿ ತರಬೇತಿ ನೀಡಲಾಗಿತ್ತು. ಈ ಪರೀಕ್ಷೆಯಲ್ಲಿ 103 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. 76 ವಿದ್ಯಾರ್ಥಿಗಳು ಎಂಜಿನಿಯರಿಂಗ್,4 ವಿದ್ಯಾರ್ಥಿಗಳು ಬಿಎಸ್‌ಸಿ ಅಗ್ರಿ, ಇಬ್ಬರು ವೆಟರ್ನರಿ ಸೈನ್ಸ್, 16 ವಿದ್ಯಾರ್ಥಿಗಳು ನರ್ಸಿಂಗ್, ಬಿಎಸ್ಸಿ, ಬಿಎಸ್ಸಿ ಆಪ್ತಮಾಲಜಿ, 3 ವಿದ್ಯಾರ್ಥಿಗಳು ಬಿಎಸ್ ವೈಎಸ್, ಇಬ್ಬರು ಮೆಡಿಕಲ್ ದಾಖಲಾತಿಗೆ ಅರ್ಹತೆ ಪಡೆದಿದ್ದಾರೆಂದರು.



ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ಮಾರ್ಗದರ್ಶನದಲ್ಲಿ ತಾಲೂಕಿನ ಗ್ರಾಮೀಣ ಭಾಗದ 200 ಅರ್ಹ ವಿದ್ಯಾರ್ಥಿಗಳಿಗೆ ತಲಾ 50 ಸಾವಿರ ರೂ. ಮೌಲ್ಯದ ಲ್ಯಾಪ್ಟಾಪ್‌ಗಳನ್ನು ವಿತರಿಸಲು ಯೋಜನೆ ರೂಪಿಸಲಾಗಿದೆ. ಒಟ್ಟು 1 ಕೋಟಿ ರೂ. ವೆಚ್ಚದ ಈ ಯೋಜನೆಯಡಿ ಮುಂದಿನ ವಾರದಲ್ಲಿ ಲ್ಯಾಪ್‌ಟಾಪ್ ವಿತರಣೆ ನಡೆಯಲಿದೆ ಎಂದರು.

ಅರ್ಹ ವಿದ್ಯಾರ್ಥಿಗಳು ಶಾಸಕರ ಕಚೇರಿಯಲ್ಲಿ ಅರ್ಜಿ ಸಲ್ಲಿಸಿ ಯೋಜನೆಯ ಸೌಲಭ್ಯ ಪಡೆಯಬಹುದು. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅಗತ್ಯವಿರುವ ಎಲ್ಲ ರೀತಿಯ ಸಹಕಾರ ನೀಡಲಾಗುವುದು. ಈ ಸಾಲಿನಲ್ಲಿಯೂ ಸಿಇಟಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿಶೇಷ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುವುದು ಎಂದು ಶಾಸಕ ಡಾ. ರಂಗನಾಥ ತಿಳಿಸಿದರು.

# ಕಸವಿಲೇವಾರಿ ಘಟಕದಲ್ಲಿ ಹತ್ತಿ ಉರಿಯುತ್ತಿರುವ ಬೆಂಕಿ! ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ಪುರಸಭೆ



ಕುಣಿಗಲ್ : ಕುಣಿಗಲ್ ತಾಲೂಕಿನ ಕಾಡುಮತ್ತಿಕೆರೆ ಗ್ರಾಮದ ಪುರಸಭೆ ಕಸವಿಲೇವಾರಿ ಘಟಕದಲ್ಲಿ ಸುಮಾರು ದಿನಗಳಿಂದ ಕಸದ ರಾಶಿ ಬೆಂಕಿ ಹತ್ತಿ ಉರಿಯುತ್ತದೆ, ರಾಜ್ಯ ಹೆದ್ದಾರಿ ಪಕ್ಕದ ಹೊಸ ವಿಲೇವಾರಿ ಘಟಕಕ್ಕೆ ಕಸವನ್ನುಸುರಿಯಲಾಗುತ್ತಿದ್ದೂ ಅದು ಗಬ್ಬೆದ್ದು ನಾರುತ್ತಿದೆ, ತ್ಯಾಜ್ಯ ವಿಲೇವಾರಿ ಘಟಕಗಳಲ್ಲಿ ಪದೇ ಪದೇ ಸಂಭವಿಸುತ್ತಿರುವ ಬೆಂಕಿ ಅವಘಡಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅನುಮಾನಗಳು ವ್ಯಕ್ತವಾಗಿವೆ,

ಸಮರ್ಪಕ ಕಸ ವಿಲೇವಾರಿ ಮಾಡದ ಪುರಸಭೆಗೆ ಸಾರ್ವಜನಿಕರು ಇಡಿ ಶಾಪ ಹಾಕುತ್ತಿದ್ದಾರೆ, ಕಸ ವಿಲೇವಾರಿ ಘಟಕಕ್ಕೆ ಇದೀಗ ಬೆಂಕಿ ಬಿದ್ದಿದ್ದು ದಟ್ಟ ಹೊಗೆ ಹರಡಿದೆ, ಇದರಿಂದಾಗಿ ರಸ್ತೆಯಲ್ಲಿ ಓಡಾಡುವ ವಾಹನ ಸವಾರರು ಕಿರಿಕಿರಿ ಅನುಭವಿಸುತ್ತಿದ್ದಾರೆ, ಜೊತೆಗೆ ಗಬ್ಬುನರುತ್ತಿರುವ ಕಸಕ್ಕೆ ನಾಯಿಗಳ ಹಿಂಡು ಬೀಡು ಬಿಟ್ಟಿದ್ದು, ರಸ್ತೆಯಲ್ಲಿ ನಾಯಿಗಳ ಕಾಟ ಜಾಸ್ತಿಯಾಗಿದೆ,

ಆದ್ದರಿಂದ ರಸ್ತೆಯಲ್ಲಿ ಸಂಚರಿಸುವ ಬೈಕ್ ಸವಾರರು ಹೋರಾಡಲು ತೊಂದ–ರೆ ಅನುಭವಿಸುತ್ತಿದ್ದಾರೆ, ಪ್ರತಿನಿತ್ಯ ಕುಣಿಗಲ್ ಪಟ್ಟಣಕ್ಕೆ ಬರುವ ನಾಗರೀಕರಿಗೆ ಹಲವು ಸಮಸ್ಯೆಗಳನ್ನು ತಂದೊಡ್ಡಿದೆ,

ಸುತ್ತಮುತ್ತಲ ಗ್ರಾಮದ ಜನರು ಆರೋಗ್ಯ–ಕ್ಕೆ ತುತ್ತಾಗಿ ತೊಂದರೆ ಅನುಭವಿಸುವ ಪರಿಸ್ಥಿತಿ ಎದುರಾಗಿದೆ, ಈ ಕಸವಿಲೇವಾರಿ ಘಟಕ ನಿರ್ವಹಣೆ ಇಲ್ಲದೆ ಜನರ ಜೀವದ ಜೊತೆ ಆಟವಾಡುತ್ತಿರುವ ಪುರಸಭಾ ಅಧಿಕಾರಿಗಳು, ಎಷ್ಟು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ,ಪುರಸಭೆ ಅಧಿಕಾರಿಗಳಿಗೆ ಜನರು ಹಿಡಿಶಾಪಹಾಕುತ್ತಿದ್ದಾರೆ ಎಲ್ಲೆಂದಲ್ಲಿ ಕಸ ಅಲ್ಲಿ ಹೋಗಿ ನೋಡಿದರೆ ಯಾವುದೇ ರೀತಿ ಕಸವಿಲೇವಾರು ಘಟಕಗಳು ಕೆಲಸ ಮಾಡುತ್ತಿಲ್ಲ ಅಲ್ಲಿ ಕಾರ್ಮಿಕರು ಕೂಡ ಇಲ್ಲ ಈ ಕಸ ವಿಲೇವಾರಿ ಘಟಕದಲ್ಲ ಕೇಳುವವರೂ ಯಾರು ಇಲ್ಲ ಅಲ್ಲಿ ಹಾಕಿದ ಕಸಕ್ಕೆ ಬೆಂಕಿ ಹಚ್ಚುತ್ತಾರೆ ಸರ್ಕಾರದ ನಿಯಮಗಳು ಪಾಲನೆಯಾಗುತ್ತಿಲ್ಲ ಇತ್ತ ಜನಪ್ರತಿನಿದಿನಗಳು ತಲೆಕೆಡಿಸಿಕೊಳ್ಳುತ್ತಿಲ್ಲ ಈ ಜನಪ್ರತಿನಿದಿನಗಳಿಗೆ ಅಧಿಕಾರಿಗಳು ಮುಖ್ಯ ಜನರು ಯಾವುದೇ ಲೆಕ್ಕಕ್ಕೆ ಇಲ್ಲ ಎಲೆಕ್ಷನ್ ಟ ಮ್ನಲ್ಲಿ ಮಾತ್ರ ಮತದಾರನ್ನ ನೆನಪಿಸಿಕೊಳ್ಳೂ ಜನ ಪ್ರತಿನಿದಿಗಳು ಎಲೆಕ್ಷನ್ ಆದ ನಂತರ ಅವರೆಷ್ಟೇ ಮನವಿ ಮಾಡಿದರೂ ಅಷ್ಟೇ ಇದರಿಂದ ಯಾರಾದರೂ ಸತ್ತರೆ ಬಂದು ಹಾರ ಹಾಕಿ ಹೋಗುವ ಇವರಿಗೆ 5 ವರ್ಷ ಮತದಾರರ ಮೇಲೆ ಕರುಣೆ ಆಗಲಿ ಅವರ ಕಷ್ಟ ಆಗಲಿ ಕೇಳಲು ಹೋಗುವುದಿಲ್ಲ ಇಲ್ಲ ಅಧಿಕಾರಿಗಳಿಗೆ ಎಚ್ಚರಿಕೆ ಕೂಡ ಕೊಡುವುದಿದಲ್ಲ ಎಂತ ವಿಪರ್ಯಾಸ ಜನಸಮಾನ್ಯರ ಬಾಳು ಇದಕ್ಕೆಲ್ಲ ಯಾವಾಗ ಮುಕ್ತಿ ಸಿಗುವುದೇ,

ಈ ಘಟಕದಲ್ಲಿ ಕೇವಲ ಕಸ ತ್ಯಾಜ್ಯ ಮಾತ್ರವಲ್ಲದೆ ಲಕ್ಷಾಂತರ ರೂಪಾಯಿ ಮೌಲ್ಯದ ಯಂತ್ರೋಪಕರಣಗಳು, ಮೆಷಿನರಿಗಳು ಹಾಗೂ ಕಟ್ಟಡಗಳು ಸುಟ್ಟು ಹೋಗುವ ಮೊದಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಗಮನಹರಿಸಬೇಕು,

ದಿನಪತ್ರಿಕೆ ಇದರ ಬಗ್ಗೆ ಸುದ್ದಿ ಬರೆದು ಗಮನ ಸೆಳೆದರೆ ಅವಾಗ ಎಚ್ಚೆತ್ತುಕೊಂಡು ಕೆಲಸ ಮಾಡುತ್ತಾರೋ? ನಂತರ ಪುನಃ ಅದೇ ಕೆಲಸ ಅಧಿಕಾರಿಗಳದ್ದು ಇದಕ್ಕೆಲ್ಲ ಜನಪ್ರತಿನಿದಿನಗಳು ಮತ್ತು ಅಧಿಕಾರಿಗಳು ಎಚ್ಚೆತ್ತು ಕೆಲಸ ಮಾಡುತ್ತಾರೋ ಎಂಬುದು ಕಾದು ನೋಡಬೇಕಾಗಿದೆ,,

# ಡಾ.ನಾಗಲಕ್ಷ್ಮಿ ಚೌದರಿ ಅವರ ಜಿಲ್ಲಾ ಪ್ರವಾಸ

ದಾವಣಗೆರೆ : ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾಧ ಡಾ.ನಾಗಲಕ್ಷ್ಮಿ ಚೌದರಿ ಅವರು ಆಗಸ್ಟ್–2026ರ ಮಾಹೆಯಲ್ಲಿ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಆಗಸ್ಟ್ 7 ರಂದು ಬೆಳಿಗ್ಗೆ 9.30ಕ್ಕೆ ದಾವಣಗೆರೆ ಆಗಮಿಸುವರು. ಮಧ್ಯಾಹ್ನ 12.30ಕ್ಕೆ ನಗರದ ಚಾಮರಾಜೇಂದ್ರ ವೃತ್ತದಲ್ಲಿರುವ ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡುವರು. ಸಂಜೆ 5 ಗಂಟೆಗೆ ಎಂ.ಸಿ.ಸಿ ಬಿ ಬ್ಲಾಕ್‌ನಲ್ಲಿರುವ ಡಾ.ಬಿ.ಆರ್ ಅಂಬೇಡ್ಕರ್ ಅವರ ಮೆಟ್ರಿಕ್ ನಂತರದ ಬಾಲಕಿಯರ ಹೊಸ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡುವರು. ಸಂಜೆ 6 ಗಂಟೆಗೆ ಶಾಮನೂರು ಹಾಗೂ ಕುಂದುವಾಡದ ಮಧ್ಯ ಸರ್ಕಾರಿ ನೌಕರರ ಬಡಾವಣೆ ಡಾರ್ಸ್ ಕಾಲೋನಿಯ ಹತ್ತಿರ ಸಂಚಾರಿ ಕುರಿಗಾಹಿ ಮಹಿಳೆಯರೊಂದಿಗೆ ಸಂವಾದ ನಡೆಸಿ, ವಾಸ್ತವ್ಯ ಹೂಡುವರು ಆಗಸ್ಟ್ 8 ರಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿರುವ ದಾವಣಗೆರೆ ಜಿಲ್ಲಾ ಪ್ರಥಮ ಮಹಿಳಾ ಸಾಹಿತ್ಯ ಸಮ್ಮೇಳನದ ಉದ್ಘಾಟಕರಾಗಿ ಮಾನ್ಯ ಅಧ್ಯಕ್ಷರು ಭಾಗವಹಿಸುವರು. ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿಗೆ ತೆರಳುವರೆಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ..

## ಪೊಲೀಸ್ ಕಾನ್ಸ್ಟೇಬಲ್ ನೇಮಕಾತಿ ಪರೀಕ್ಷೆ, 10472 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರು: ಡಿಸಿ

ಗಡಿಯಾರ ಹಾಗೂ ಸಿಸಿಟಿವಿ ಕಣ್ಗಾವಲು ವ್ಯವಸ್ಥೆ ಮಾಡಲಾಗಿದ್ದು , ಪ್ರತಿಯೊಂದು ಕೇಂದ್ರಕ್ಕೂ ಎಲೆಕ್ಟ್ರಾನಿಕ್ಸ್ ಡಿವೈಸ್ ಗಳ ತಪಾಸಣೆಗೆ ಇ.ಎನ್.ಟಿ ತಜ್ಞರನ್ನು ನಿಯೋಜಿಸಲಾಗಿತ್ತು. ಅಭ್ಯರ್ಥಿಗಳು ಯಾವುದೇ ಎಲೆಕ್ಟ್ರಾನಿಕ್ ಸಾಧನಗಳನ್ನು ಅಕ್ರಮವಾಗಿ ತಂದಿದ್ದಲ್ಲಿ ಪತ್ತೆ ಹಚ್ಚಲು ಕಟ್ಟುನಿಟ್ಟಿನ ತಪಾಸಣೆ ನಡೆಸಲಾಗಿದ್ದು ಯಾವುದೇ ವಸ್ತುಗಳು ಕಂಡುಬಂದಿಲ್ಲ ಎಂದು ತಿಳಿಸಿದರು. ಪರೀಕ್ಷಾ ಕೇಂದ್ರದ ಸುತ್ತಲಿನ 1 ಕಿಲೋಮೀಟರ್ ವ್ಯಾಪ್ತಿಯಲ್ಲಿ ಶಂಕಾಸ್ಪದ ವ್ಯಕ್ತಿಗಳು, ಕಾರುಗಳು ಅಥವಾ ಬೈಕ್ಗಳ ಚಲನವಲನದ ಮೇಲೆ ನಿಗಾ ವಹಿಸಲಾಗಿತ್ತು, ಮುಂಜಾಗ್ರತಾ ಕ್ರಮವಾಗಿ ಪರೀಕ್ಷಾ ಕೇಂದ್ರಗಳ ಸುತ್ತಲಿನ 1 ಕಿ.ಮೀ ವ್ಯಾಪ್ತಿಯಲ್ಲಿರುವ ಎಲ್ಲಾ ಜೆರಾಕ್ಸ್ ಕೇಂದ್ರಗಳನ್ನು ಕಡ್ಡಾಯವಾಗಿ ಮುಚ್ಚಿಸಲಾಗಿದ್ದು , ಖಾಸಗಿ ಕೋಚಿಂಗ್ ಸೆಂಟರ್ ಮಾಲೀಕರೊಂದಿಗೆ ಇಲಾಖೆಯಿಂದ ಯಾವುದೇ ಪರೀಕ್ಷಾ ಅಕ್ರಮ ನಡೆಸುವುದಿಲ್ಲವೆಂದು ಮುಚ್ಚಳಿಕೆ ಪತ್ರ ಪಡೆದುಕೊಳ್ಳಲಾಗಿತ್ತು. ಮತ್ತು ಸೂಕ್ತ ಎಚ್ಚರಿಕೆ ನೀಡಲಾಗಿತ್ತು ಎಂದರು. ಹಾವೇರಿ ಮತ್ತು ದಾವಣಗೆರೆ ಜಿಲ್ಲೆಯ ಪರೀಕ್ಷೆಯ ಓ.ಎಮ್.ಆರ್ ಶೀಟ್ಗಳ ಸ್ಕ್ಯಾನಿಂಗ್ ಕಾರ್ಯವು ಜಿಲ್ಲಾ ಕಚೇರಿಯಲ್ಲಿ ತಜ್ಞರ ಮೇಲ್ವಿಚಾರಣೆ ಹಾಗೂ ಬಿಗಿ ಭದ್ರತೆಯಲ್ಲಿ ನಡೆಯಲಿದೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಡಿವೈಎಸ್ಪಿ ಅವರು ಬೆಳಗ್ಗೆ 7 ಗಂಟೆಯಿಂದಲೇ ವಿವಿಧ ಪರೀಕ್ಷಾ ಕೇಂದ್ರಗಳಿಗೆ ವೈಯಕ್ತಿಕವಾಗಿ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ ಎಂದರು. ಒಟ್ಟು 19 ಪರೀಕ್ಷಾ ಕೇಂದ್ರಗಳಲ್ಲಿ ತೀವ್ರ ತಪಾಸಣೆಯ ನಂತರವೇ ಅಭ್ಯರ್ಥಿಗಳಿಗೆ ಪರೀಕ್ಷಾ ಕೊಠಡಿಯೊಳಗೆ ಪ್ರವೇಶ ನೀಡಲಾಯಿತು. ಪರೀಕ್ಷೆಯು ಪಾರದರ್ಶಕವಾಗಿ ಮತ್ತು ಸುಸೂತ್ರವಾಗಿ ನಡೆಯಲು 4 ಜನ ಡಿವೈಎಸ್ಪಿ, 19 ಜನ ಇನ್ಸ್ಪೆಕ್ಟರ್ಗಳು, 38 ಜನ ಸ್ಪೆಕ್ಟರ್ಗಳು ಹಾಗೂ 235 ಜನ ಹೆಡ್ ಕಾನ್ಸ್ಟೇಬಲ್/ಕಾನ್ಸ್ಟೇಬಲ್ ಗಳನ್ನು ನಿಯೋಜಿಸಲಾಗಿತ್ತು ಎಂದು ತಿಳಿಸಿದರು. ಒಎಂಆರ್ ಶೀಟ್ ಸ್ಕ್ಯಾನಿಂಗ್ ಹಂತದಲ್ಲಿ ಯಾವುದೇ ರೀತಿಯ ತಾಂತ್ರಿಕ ಲೋಪದೋಷಗಳು ಅಥವಾ ವ್ಯತ್ಯಾಸಗಳು ಉಂಟಾಗದಂತೆ ಅತ್ಯಂತ ಎಚ್ಚರಿಕೆಯಿಂದ ಮತ್ತು ನಿಖರವಾಗಿ ಸ್ಕ್ಯಾನ್ ಮಾಡುವಂತೆ ತಂತ್ರಜ್ಞರು ಹಾಗೂ ತಾಂತ್ರಿಕ ಸಿಬ್ಬಂದಿಗೆ ಜಿಲ್ಲಾಧಿಕಾರಿಗಳು ಸ್ಪಷ್ಟ ನಿರ್ದೇಶನ ನೀಡಲಾಗಿದೆ.

## 'ಭಾರತವನ್ನು ಟಾರ್ಗೆಟ್ ಮಾಡಲು ಅಸ್ತ್ರ ಡ್ರಗ್ಸ್'

ಮಾದಕ ವಸ್ತುಗಳ ವ್ಯಸನದಿಂದ ದೂರವಿದ್ದಾಗ ಮಾತ್ರ ಆರೋಗ್ಯಕರ ಹಾಗೂ ಶಕ್ತಿಶಾಲಿ ಸಮಾಜ ನಿರ್ಮಾಣ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಯುವಕರೇ ದೇಶದ ಭವಿಷ್ಯ ಎಂಬುದು ಶತ್ರು ರಾಷ್ಟಗಳಿಗೆ ತಿಳಿದಿದೆ. ಹೀಗಾಗಿ, ಯುವಜನತೆಯನ್ನು ದುರ್ಬಲಗೊಳಿಸುವ ಉದ್ದೇಶದಿಂದ ಅವು ಡ್ರಗ್ಸ್ ಪೂರೈಕೆಯನ್ನು ಭಯೋತ್ಪಾದಕ ಚಟುವಟಿಕೆಗಳ ಭಾಗವಾಗಿ ಬಳಸುತ್ತಿವೆ ಎಂದು ಮೋದಿ ಆರೋಪಿಸಿದರು. ಡ್ರಗ್ಸ್ ವ್ಯಸನಕ್ಕೆ ಒಳಗಾದವರನ್ನು ಸಮಾಜ ನೋಡುವ ರೀತಿಯಲ್ಲೂ ಬದಲಾವಣೆ ಅಗತ್ಯ ಎಂದು ಹೇಳಿದ ಪ್ರಧಾನಿ ಮೋದಿ, ಮಾದಕ ವ್ಯಸನದಿಂದ ಹೊರಬಂದು ಸಾಮಾನ್ಯ ಜೀವನಕ್ಕೆ ಮರಳುವವರು ನಿಜವಾದ ಹೋರಾಟಗಾರರು. ಅಂತಹವರನ್ನು ಸಮಾಜ ಗೌರವಿಸಬೇಕು ಮತ್ತು ಅವರನ್ನು ತಮ್ಮವರಂತೆ ಸ್ವೀಕರಿಸಬೇಕು ಎಂದು ಕರೆ ನೀಡಿದರು. "ಸಮಾಜವು ಅವರನ್ನು ಗೌರವಿಸಬೇಕು, ಅಪ್ಪಿಕೊಳ್ಳಬೇಕು ಮತ್ತು ಅವರಿಗೆ ಎರಡನೇ ಅವಕಾಶ ನೀಡಬೇಕು" ಎಂದು ಹೇಳಿದರು. 'ನಶಾ ಮುಕ್ತ ಯುವ ಫಾರ್ ವಿಕಸಿತ ಭಾರತ ಸಂಕಲ್ಪ ಅಭಿಯಾನ'ದ ಮೂಲಕ ದೇಶದ ಯುವಜನತೆಯಲ್ಲಿ ಮಾದಕ ವ್ಯಸನದ ವಿರುದ್ಧ ಜಾಗೃತಿ ಮೂಡಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಅಭಿಯಾನಕ್ಕೆ ವರ್ಚುವಲ್ ಆಗಿ ಚಾಲನೆ ನೀಡಿದ ವೇಳೆ ಹೆಚ್ಚಿನ ಸಂಖ್ಯೆಯ ಯುವಕರು ಭಾಗವಹಿಸಿದ್ದರು. ತಮ್ಮನ್ನು ಉಜಟಿ–ಚ ಪ್ರತಿನಿಧಿಗಳೆಂದು ಗುರುತಿಸಿಕೊಂಡಿದ್ದ ಯುವಕರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸಾರ್ವಜನಿಕ ಪರೀಕ್ಷಾ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಆಗ್ರಹಿಸಿ ದೆಹಲಿ ಸೇರಿದಂತೆ ದೇಶದ ವಿವಿಧೆಡೆ ವಿದ್ಯಾರ್ಥಿಗಳ ಬೃಹತ್ ಪ್ರತಿಭಟನೆಗಳು ನಡೆದ ಕೆಲವೇ ದಿನಗಳ ಬಳಿಕ ಪ್ರಧಾನಿ ಮೋದಿ ಅವರು ಯುವಜನತೆಯನ್ನು ಉದ್ದೇಶಿಸಿ ಈ ಸಂದೇಶ ನೀಡಿದ್ದಾರೆ.

## ಕಾವೇರಿ ಕಿಚ್ಚು: 'ಭೂಮಿ–ನೀರು–ಭಾಷೆ ವಿಚಾರ ಬಂದಾಗ ಕರ್ನಾಟಕ ಒಂದಾಗಬೇಕು': ಸಿದ್ದರಾಮಯ್ಯ

ಆ ಸಂದರ್ಭಗಳಲ್ಲಿ ಪ್ರತಿಪಕ್ಷಗಳು ಸರ್ಕಾರದ ಬೆಂಬಲಕ್ಕೆ ನಿಂತಿದ್ದವು ಎಂದು ಸಿದ್ದರಾಮಯ್ಯ ನೆನಪಿಸಿದ್ದಾರೆ. "ಹಿಂದೆ ಅಧಿಕಾರದಲ್ಲಿದ್ದ ಎಲ್ಲ ರಾಜಕೀಯ ಪಕ್ಷಗಳು ಹಲವು ಬಾರಿ ಇಂತಹ ನಿರ್ಣಾಯಕ ಪರಿಸ್ಥಿತಿಗಳನ್ನು ಎದುರಿಸಿವೆ. ಆ ಸಂದರ್ಭಗಳಲ್ಲಿ ಪ್ರತಿಪಕ್ಷಗಳು ಸರ್ಕಾರದ ಬೆಂಬಲಕ್ಕೆ ನಿಂತಿವೆ. ಈಗಲೂ ರಾಜ್ಯದ ಹಿತಕ್ಕಾಗಿ ಪ್ರತಿಪಕ್ಷಗಳು ರಚನಾತ್ಮಕ ಸಲಹೆಗಳನ್ನು ನೀಡುವುದರ ಜೊತೆಗೆ ಸರ್ಕಾರದ ಬೆಂಬಲಕ್ಕೆ ನಿಲ್ಲಲಿವೆ ಎಂಬ ವಿಶ್ವಾಸ ನನಗಿದೆ" ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕದ ಹಿತಾಸಕ್ತಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರ ಮತ್ತು ಪ್ರತಿಪಕ್ಷಗಳು ಒಗ್ಗಟ್ಟಾಗಿ ಕಾರ್ಯನಿರ್ವಹಿಸಬೇಕೆಂಬ ಸಂದೇಶವನ್ನು ಸಿದ್ದರಾಮಯ್ಯ ನೀಡಿದ್ದಾರೆ. ಸರ್ವಪಕ್ಷ ಸಭೆಯಲ್ಲಿ ಉಪಮುಖ್ಯಮಂತ್ರಿ ಜಿ. ಪರಮೇಶ್ವರ, ಕೇಂದ್ರ ಸಚಿವರಾದ ವಿ. ಸೋಮಣ್ಣ ಮತ್ತು ಶೋಭಾ ಕರಂದ್ಲಾಜೆ, ಕೆಪಿಸಿಸಿ ಅಧ್ಯಕ್ಷ ಎಚ್.ಕೆ. ಪಾಟೀಲ್, ರಾಜ್ಯ ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್ ಹಾಗೂ ಕೃಷ್ಣ ಬೈರೇಗೌಡ, ದೆಹಲಿಯಲ್ಲಿರುವ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ, ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

# ಉದ್ಯೋಗ ಮಾಡಿದರೆ ಕೇವಲ ಮನೆ ಕಟ್ಟಲು ಸಾಧ್ಯ, ಉದ್ಯಮಿಗಳಾದರೆ ಸಾಮ್ರಾಜ್ಯವನ್ನೇ ಕಟ್ಟಬಹುದು : ರವಿಶಂಕರ್



ದಾವಣಗೆರೆ : ಉದ್ಯೋಗ ಮಾಡಿದರೆ ಕೇವಲ ಮನೆ ಕಟ್ಟಲು ಸಾಧ್ಯ. ಉದ್ಯಮಿಗಳಾದರೆ ಸಾಮ್ರಾಜ್ಯವನ್ನೇ ಕಟ್ಟಬಹುದು. ಅಪಾರ ಅವಕಾಶಗಳಿರುವ ಈ ಕಾಲದಲ್ಲಿ ನಮ್ಮ ಮಕ್ಕಳು ಉದ್ಯಮಿಗಳಾಗಲು ಉತ್ತೇಜನ ನೀಡಲು ಸಮಾವೇಶವೊಂದನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಧ್ಯಕ್ಷ ಆರ್.ಪಿ. ರವಿಶಂಕರ್ ಹೇಳಿದ್ದಾರೆ. ಕರ್ನಾಟಕ ಆರ್ಯವೈಶ್ಯ ಮಹಾಸಭಾದ ದಾವಣಗೆರೆ ಜಿಲ್ಲಾ ಸಮಿತಿ ವತಿಯಿಂದ ನಗರದ ಬಿಐಇಟಿ ಕಾಲೇಜಿನಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಆಯೋಜಿಸಿದ್ದ ದಾವಣಗೆರೆ ಜಿಲ್ಲಾ ಆರ್ಯವೈಶ್ಯ ಸಮಾವೇಶದ ದಿಕ್ಸೂಚಿ ಭಾಷಣ ಮಾಡುವಾಗ ಈ ಕರೆ ನೀಡಿದ್ದಾರೆ. ಆರ್ಯವೈಶ್ಯ ಸಮುದಾಯದಲ್ಲಿ ಉದ್ಯಮಶೀಲತೆಗೆ ಉತ್ತೇಜನ ನೀಡಲು ಬೆಂಗಳೂರಿನಲ್ಲಿ ಬರುವ ಡಿ.25, 26 ಹಾಗೂ 27ರಂದು ವಿಶ್ವ ಆರ್ಯವೈಶ್ಯ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.




ಹುಣಸೂರು: ಬಿ ಜೆಡ್ ಜಮೀರ್ ಅಹ್ಮದ್ ಖಾನ್ ಅಭಿಮಾನಿ ಬಳಗದ ವತಿಯಿಂದ 60ನೇ ವರ್ಷದ ಹುಟ್ಟುಹಬ್ಬ ಅಂಗವಾಗಿ ಕಟ್ಟೆಮಲವಾಡಿ ಹಜರತ್ ಸೈಯದ್ ನೂರ್ ಮೊಹಮ್ಮದ್ ಶಾಖಾದ್ರಿ ದೇವಸ್ಥಾನಕ್ಕೆ ಅಭಿಮಾನಿಗಳು ಭೇಟಿನೀಡಿ ಮುಂದಿನ ರಾಜಕೀಯ ಜೀವನವನ್ನು ಯಶಸ್ವಿಯಾಗಲಿ ಎಂದು ಹೂವು ಹಾಕಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ಪೈಸೆಲ್ ಹಾಗೂ ಬಿ ಝೆಡ್ ಗ್ರೂಪ್ ಅಭಿಮಾನಿ ಬಳಗದ ಅಧ್ಯಕ್ಷ ಯಾಸಿರ್ ಖಾನ್ ನವೀನ ರಾಖೀಬ್ ಅಜೀಂ ಮುಬಾರಕ್ ಅಯಾನ್ ಶಫ ಅಹ್ಮದ್ ಹಾಜರಿದ್ದರು

# ವಿದ್ಯಾರ್ಥಿಗಳು ಉತ್ತಮ ಆದರ್ಶ, ಸಂಸ್ಕಾರ ಬೆಳೆಸಿಕೊಂಡು ಚೆನ್ನಾಗಿ ಅಭ್ಯಾಸ ಮಾಡಿದರೆ ಭವಿಷ್ಯದಲ್ಲಿ ಯಶಸ್ಸು ಕಾಣಲು ಸಾಧ್ಯ. : ಪಿ ಮಹಾಬಲೇಶ್ವರಗೌಡ್ರು



ಹರಪನಹಳ್ಳಿ: ಶಿಕ್ಷಣ ಪಡೆಯುವಾಗಲೇ ವಿದ್ಯಾರ್ಥಿಗಳು ದೊಡ್ಡಮಟ್ಟದ ಸಾಧನೆಯ ಗುರಿ ಇಟ್ಟು ಕೊಳ್ಳಬೇಕೆಂದು ಸ್ಥಳೀಯ ಸಲಹಾ ಸಮಿತಿಯ ಅಧ್ಯಕ್ಷರಾದ ಪಿ ಮಹಾಬಲೇಶ್ವರಗೌಡ್ರು ಹೇಳಿದರು.

ನಗರದ ಶ್ರೀ ತರಳಬಾಳು ಜಗದ್ಗುರು ವಿದ್ಯಾ ಸಂಸ್ಥೆಯ ಎಚ್ ಪಿ ಎಸ್ ಪದವಿ ಪೂರ್ವ ಕಾಲೇಜಿನ 2026–27ನೇ ಸಾಲಿನ ಪಠ್ಯ ಪೂರಕ ಚಟುವಟಿಕೆಗಳು, ರಾಷ್ಟ್ರೀಯ ಸೇವಾ ಯೋಜನಾ ಘಟಕ,ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಅತ್ಯಗತ್ಯ, ಜೀವನದಲ್ಲಿ ತಿರುವು ಪಡೆದುಕೊಳ್ಳುವ ಹಂತ ಅಂದರೆ ಪಿಯುಸಿ ಅದು ಶಿಕ್ಷಣ ಕ್ಷೇತ್ರ, ಈ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಉತ್ತಮ ಆದರ್ಶ, ಸಂಸ್ಕಾರ ಬೆಳೆಸಿಕೊಂಡು ಚೆನ್ನಾಗಿ ಅಭ್ಯಾಸ ಮಾಡಿದರೆ ಭವಿಷ್ಯದಲ್ಲಿ ಯಶಸ್ಸು ಕಾಣಲು ಸಾಧ್ಯವಾಗುತ್ತದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ನಿವೃತ್ತ ಪಿಡಿಓ ಶಂಕರಗೌಡ ಬಿ ಪಾಟೀಲ್ ಮಾತನಾಡಿ ವಿದ್ಯಾರ್ಥಿಗಳಿಗೆ ಕನಸಿದ್ದರೆ ಸಾಲದು ಆ ಕನಸು ನನಸಾಗಲು ಕಠಿಣ ಪರಿಶ್ರಮ ಬೇಕಾಗುತ್ತದೆ ಆದ್ದ–ರಿಂದ ಚೆನ್ನಾಗಿ ಅಭ್ಯಾಸ ಮಾಡಿ ಪೋಷಕರಿಗೂ ಕಾಲೇಜಿಗೂ ಕೀರ್ತಿ ತರಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗದ ಉಪ ಪ್ರಾಂಶುಪಾಲರಾದ ವಿಶ್ವನಾಥಯ್ಯ ಬಿ.ಎಂ, ಮಾತನಾಡಿ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಗಂಭೀರ ಚಿಂತನೆ ಅಗತ್ಯವಾಗಿದ್ದು ಮನಸ್ಸಿನ ನಿಯಂತ್ರಣಕ್ಕಾಗಿ ದೈಹಿಕ ಶಕ್ತಿ,ಮಾನಸಿಕ ಶಕ್ತಿ, ನೈತಿಕ ಶಕ್ತಿ ಹಾಗೂ ಆಧ್ಯಾತ್ಮಿಕ ಶಕ್ತಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಪ್ರತಿಯೊಬ್ಬರಿಗೂ ಯಶಸ್ಸು ಸಾಧ್ಯವಾಗುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಎಸ್ . ಟಿ.ಜೆ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರಾದ ಗುರುದೇವ್ ಕೆ.ಎಂ,ಮಾತನಾಡಿ ವಿದ್ಯಾರ್ಥಿ ದೆಸೆಯಲ್ಲಿ ಏಕಾಗ್ರತೆ ಬೆಳೆಸಿಕೊಂಡು ಗುರಿಯತ್ತ ಸಾಗಿದರೆ ಏನನ್ನಾದರೂ ಸಾಧಿಸಬಹುದು ಹಾಗೂ ಪರಿಶ್ರಮ ಪಟ್ಟು ಗುರಿಯೆ ಕಡೆಗೆ ಸಾಗಲು ಛಲ ಹೊಂದಿದ್ದರೆ ಸಾಧಕರಾಗ ಬಹುದು ಎಂದರು.

ಇದೇ ಸಂದರ್ಭದಲ್ಲಿ ಭೂಗೋಳ ಶಾಸ್ತ್ರದಲ್ಲಿ ನೂರಕ್ಕೆ ನೂರು ಅಂಕ ಪಡೆದ ವಿದ್ಯಾರ್ಥಿಗಳಾದ ಶಹೀನ ಬಾನು ಆರ್, ಹಂಪ ಸಾಗರದ ವಿದ್ಯಾಶ್ರೀ ಇವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರರಾದ ಪಿ. ಶಿವಗಂಗಮ್ಮ ವಹಿಸಿಕೊಂಡು ಮಾತನಾಡತ್ತಾ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ದತ್ತಿನಿದಿಯಲ್ಲಿ ನಗದು ಬಹುಮಾನ ವಿತರಣೆ ಮಾಡಿ ವಿದ್ಯಾರ್ಥಿಗಳಿಗೆ ದತ್ತಿನಿ ಸ್ಫೂರ್ತಿ ದಾಯಕವಾಗಿದೆ ಈದತ್ತಿ ನಿಧಿ ಇಟ್ಟ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಿ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಇದೇ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಶಹೀನಾಬಾನು.ಆರ್, ಹಂಪ ಸಾಗರದ ವಿದ್ಯಾಶ್ರೀ, ಎಲ್ ಮೈಲಮ್ಮ, ಅನುಷಾ ಪಿ.ಎನ್ , ಹಂಸ ಓಲೆಕಾರ್, ಸಂಜನಾ, ಬಿ ಸಾದಿಯ ಬಾನು, ಚಲವಾದಿ ಸುಮಿತ್ರ, ಶೇಕ್ ಆಯೇಷಾ, ಪ್ರೇಮ ಕಾವ್ಯ ಬಾಯಿ ಈ ವಿದ್ಯಾರ್ಥಿಗಳು 2025–26 ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ಡಿಸ್ಟಿಂಕ್ಷನ್ ಪಡೆದಿದ್ದು ಇವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಉಪಸ್ಥಿತಿ ಹೆಚ್ ಶಿವಾನಂದ್ ಎನ್ ಎಸ್ ಎಸ್ ಕಾರ್ಯಕ್ರಮಾಧಿಕಾರಿಗಳು ಉಪನ್ಯಾಸಕರಾದ ಬಸವರಾಜ್ ಸಿ ಎಸ್, ರವೀಂದ್ರ ಕೆ. ಬಿ. ವೀರೇಶ್ ಎಂ. ಎಸ್. ಸಂತೋಷ್ ಮಹಾಲಿಂಗಪ್ಪ ಬಿ ಗೌಡರ, ಸೌಮ್ಯ ಎಸ್, ಶ್ವೇತಾ.ಎಂ. ಬಿ,ಸುಪ್ರಿಯಾ, ಮಂಜುನಾಥ್ ಮಾಳಗಿ, ಗುರುಬಸವರಾಜ್, ಎಚ್. ಅವಿನಾಶ್, ನರೇಂದ್ರ ಮೋಹನ್ ಕುಮಾರ್, ಶಂಕ್ರಪ್ಪ ಎಚ್, ಸೌಭಾಗ್ಯ, ಸುಮಾ,ಸಿಬ್ಬಂದಿ ವರ್ಗ ಕಾಲೇಜು ಸ್ಥಳೀಯ ಸಲಹಾ ಸಮಿತಿಯ ಸದಸ್ಯರಾದ ಆರ್ ಶಿವಕುಮಾರ್ ಗೌಡ, ಚಿದಾನಂದ್ ಸಿ ಪಾಟೀಲ್, ಪಾಣಿರಾಜ್ , ಯು.ಕೆ ಮಲ್ಲಿಕಾರ್ಜುನ, ಉದಯಕುಮಾರ್, ಕವಿತಾ ಎಸ್, ನಾಗನಗೌಡ ಪಾಟೀಲ್, ಜ್ಯೋತಿ ರವಿಕುಮಾರ್, ವಿದ್ಯಾರ್ಥಿಗಳು ಮತ್ತು ಪೋಷಕರು ಉಪಸ್ಥಿತರಿದ್ದರು.

# ಮಳೆಗಾಗಿ ಕತ್ತೆಗಳ ಮದುವೆ: ದೇವರಿಗೆ ಮೊರೆ ಹೋದ ಗ್ರಾಮಸ್ಥರು



ಸಿರಾ : ತಾಲೂಕಿನಾದ್ಯಂತ ಸಮರ್ಪಕ ಮಳೆಯಾಗದ ಹಿನ್ನೆಲೆಯಲ್ಲಿ ರೈತರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ. ಶೇಂಗಾ, ಅಡಿಕೆ, ತೆಂಗು, ರಾಗಿ,ಜೋಳ ಸೇರಿದಂತೆ ವಿವಿಧ ಬೆಳೆಗಳು ನೀರಿನ ಕೊರತೆಯಿಂದ ಒಣಗುವ ಸ್ಥಿತಿ ಮರ್ಾಣವಾಗಿದ್ದು, ಕೃಷಿ ಚಟುವಟಿಕೆಗಳು ಸಂಕಷ್ಟಕ್ಕೆ ಸಿಲುಕಿವೆ. ಇದರಿಂದ ಮಳೆಗಾಗಿ ದೇವರ ಮೊರೆ ಹೋಗುವ ಉದ್ದೇಶದಿಂದ ಗ್ರಾಮಸ್ಥರು ಈ ವಿಶಿಷ್ಟ ಆಚರಣೆಯನ್ನು ನಡೆಸಿದರು.

ಲಿಂಗದಹಳ್ಳಿ ಗ್ರಾಮದಲ್ಲಿ ಕತ್ತೆಗಳಿಗೆ ಸಾಂಪ್ರದಾಯಿಕವಾಗಿ ಮದುವೆ ನೆರವೇರಿಸಿ, ಮಳೆಯಾಗಲೆಂದು ಪೂಜೆ ಸಲ್ಲಿಸಲಾಯಿತು. ಈ ವೇಳೆ ಗ್ರಾಮಸ್ಥರು ಉತ್ತಮ ಮಳೆಯಾಗಿ ರೈತರ ಬೆಳೆಗಳು ಉಳಿಯಲಿ ಎಂದು ಪ್ರಾರ್ಥಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಎಲ್.ಜಿ. ರಂಗನಾಥ್, ಮುಖಂಡರಾದ ಎಲ್.ಡಿ. ಉಮೇಶ್, ತಿಮ್ಮೇಗೌಡರು, ಸಿದ್ದೇಶ್, ಡೈರಿ ಮಹೇಶ್, ಆನಂದ್, ರವಿ, ಎಲ್.ಆರ್. ಮಾರುತಿ, ಎಲ್.ಎಂ. ತಿಪ್ಪೇಸ್ವಾಮಿ, ನಾರಾಯಣಪ್ಪ, ಮಂಜುನಾಥ್, ಗೋವಿಂದರಾಜು, ಜಗದೀಶ್, ಕೃಷ್ಣ, ಶೇಖರ್ ಸೇರಿದಂತೆ ಗ್ರಾಮದ ಅನೇಕ ಮುಖಂಡರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

# ಜಿ. ಸೋಮನಾಥ್‌ಗೆ ಸುನಾಮಿ ರಾಷ್ಟ್ರೀಯ ಮಾಧ್ಯಮ ಪ್ರಶಸ್ತಿ



ಹಗರಿಬೊಮ್ಮನಹಳ್ಳಿ : ಸುನಾಮಿ ಪತ್ರಿಕೆ ವತಿಯಿಂದ ದಶಕದ ಸಂಭ್ರಮದಲ್ಲಿ ಪ್ರತಿಷ್ಠಿತ ಸುನಾಮಿ ರಾಷ್ಟ್ರೀಯ ಮಾಧ್ಯಮ ಪ್ರಶಸ್ತಿ 2026ಕ್ಕೆ ಈ ಸಮಯ ನ್ಯೂಸ್ ದಿನಪತ್ರಿಕೆಯ ಸಂಪಾದಕರು,ವಿಜಯನಗರವಾಣಿ ವರದಿಗಾರರಾದ ಜಿ. ಸೋಮನಾಥ್ ರವರು ಆಯ್ಕೆಯಾಗಿದ್ದಾರೆ.

ಸುನಾಮಿ ಪತ್ರಿಕೆಯ ದಶಕದ ಸಂಭ್ರಮದ ಅಂಗವಾಗಿ "ಬದಲಾವಣೆಯ ಅಲೆಗೆ ಹತ್ತರ ಸಂಭ್ರಮ ಸಾಧಕರ ಜಗತ್ತಿಗೆ ಸುನಾಮಿ ಪ್ರಣಾಮ" ಎಂಬ ಧ್ಯೇಯದೊಂದಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಗಸ್ಟ್ 5ರಂದು (ಬುಧವಾರ) ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಗಾಂಧಿ ಭವನ, ಕುಮಾರಕೃಪಾ ರಸ್ತೆಯಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಕೇಂದ್ರ ಸಚಿವರಾದ ಡಾ. ಎಂ. ವೀರಪ್ಪ ಮೊಯ್ಲಿ ರವರು ಅಧ್ಯಕ್ಷತೆ ಬಳ್ಳಾರಿ ಲೋಕಸಭಾ ಸದಸ್ಯರಾದ ಈ.ತುಕಾರಾಂ ರವರು ವಿಶೇಷ ಆಹ್ವಾನಿರಾದ ಡಾ.ಕುಂ.ವೀರಭದ್ರಪ್ಪ ರವರು ಅಧ್ಯಕ್ಷತೆಯನ್ನು ಸುನಾಮಿ ಪತ್ರಿಕೆಯ ಸಂಪಾದಕರಾದ ಹುಳ್ಳಿ ಪ್ರಕಾಶ್ ವಹಿಸಲಿದ್ದು, ರಾಜ್ಯದ ವಿವಿಧ ಭಾಗಗಳಿಂದ ಹಿರಿಯ ಪತ್ರಕರ್ತರು, ಸಂಪಾದಕರು, ಮಾಧ್ಯಮ ಪ್ರತಿನಿಧಿಗಳು, ಸಾಹಿತಿಗಳು, ಸಾಮಾಜಿಕ ಮುಖಂಡರು, ಜನಪ್ರತಿನಿಧಿಗಳು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಲಿದ್ದಾರೆ.

ಮಾಧ್ಯಮ ಕ್ಷೇತ್ರದಲ್ಲಿ ಜಿ. ಸೋಮನಾಥ್ ಅವರು ಸಲ್ಲಿಸಿರುವ ವಿಶಿಷ್ಟ ಸೇವೆ, ಜನಪರ ಪತ್ರಿಕೋದ್ಯಮ, ಸಮಾಜಮುಖಿ ವರದಿಗಾರಿಕೆ ಹಾಗೂ ಗ್ರಾಮೀಣ ಸಮಸ್ಯೆಗಳನ್ನು ಜನಪ್ರತಿನಿಧಿಗಳ ಮತ್ತು ಸರ್ಕಾರದ ಗಮನಕ್ಕೆ ತರುವಲ್ಲಿ ಅವರು ವಹಿಸಿರುವ ಮಹತ್ವದ ಪಾತ್ರವನ್ನು ಪರಿಗಣಿಸಿ ಅವರಿಗೆ ಸುನಾಮಿ ರಾಷ್ಟ್ರೀಯ ಮಾಧ್ಯಮ ಪ್ರಶಸ್ತಿ–2026 ಪ್ರದಾನ ಮಾಡಲಾಗುತ್ತಿದೆ.

ಇದೇ ಸಂದರ್ಭದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಯ್ಕೆಯಾದ ಮಾಧ್ಯಮ ಕ್ಷೇತ್ರದ ಸಾಧಕರು, ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಜೊತೆಗೆ ಸುನಾಮಿ ಪತ್ರಿ–ಕೆಯ ದಶಕದ ಪಯಣ, ಮಾಧ್ಯಮ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಳು, ಸಮಾಜಮುಖಿ ಕಾರ್ಯಗಳು ಹಾಗೂ ಪತ್ರಿಕೆಯ ಸಾಧನೆಗಳ ಕುರಿತು ವಿಶೇಷ ಪರಿಚಯ ಕಾರ್ಯಕ್ರಮವೂ ನಡೆಯಲಿದೆ.

ಜಿ. ಸೋಮನಾಥ್ ಅವರಿಗೆ ಸುನಾಮಿ "ರಾಷ್ಟ್ರೀಯ ಮಾಧ್ಯಮ" ಪ್ರಶಸ್ತಿ ಲಭಿಸಿರುವುದಕ್ಕೆ ಜನನಿ ಸೇವಾ ಟ್ರಸ್ಟ್ ಅಧ್ಯಕ್ಷ ಎ. ಕೇಶವಮೂರ್ತಿ ಅವರು ಅಭಿನಂದನೆ ಸಲ್ಲಿಸಿದ್ದಾರೆ.

# ಕರ್ನಾಟಕ ದಲಿತ ಸಂಘರ್ಷ ಸಮಿತಿ (ದಾದಾಸಾಹೇಬ್ ಡಾ. ಎನ್. ಮೂರ್ತಿ ಸ್ಥಾಪಿತ): ನೂತನ ಪದಾಧಿಕಾರಿಗಳ ಆಯ್ಕೆ ಮತ್ತು ನೇಮಕಾತಿ ಆದೇಶ ಪತ್ರ ವಿತರಣೆ

ನರಗುಂದ: ಕರ್ನಾಟಕ ದಲಿತ ಸಂಘರ್ಷ ಸಮಿತಿ (ದಾದಾಸಾಹೇಬ್ ಡಾ. ಎನ್. ಮೂರ್ತಿ ಸ್ಥಾಪಿತ) ಗದಗ ಜಿಲ್ಲಾ ಘಟಕದ ವತಿಯಿಂದ ನರಗುಂದ ತಾಲೂಕು ಅಧ್ಯಕ್ಷರಾಗಿ ಕೃಷ್ಣಪ್ಪ ಎಚ್. ಜೋಗಣ್ಣನವರ್ ಅವರನ್ನು ನೇಮಕ ಮಾಡಿ ಆದೇಶ ಪತ್ರ ನೀಡಲಾಗಿದೆ. ಗದಗ ಜಿಲ್ಲಾಧ್ಯಕ್ಷರಾದ ಡಿ.ಜಿ. ಕಟ್ಟಿಮನಿ ಅವರ ಉಪಸ್ಥಿತಿಯಲ್ಲಿ ಈ ನೇಮಕಾತಿ ಪ್ರಕ್ರಿಯೆ ಜರುಗಿತು.

ಈ ನೇಮಕಾತಿಯೊಂದಿಗೆ ತಾಲೂಕು ಘಟಕದ ವಿವಿಧ ಜವಾಬ್ದಾರಿಗಳಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಬಸವರಾಜ್ ಎಂ. ತಡಸಿ ತಾಲೂಕು ಗೌರವಾಧ್ಯಕ್ಷರಾಗಿ, ದೊಡ್ಡಪ್ಪ ಡಿ. ಮ್ಯಾಗೇರಿ ಹಾಗೂ ಸಣ್ಣದುರ್ಗಪ್ಪ ಕೆ. ದಂಡಾಪುರ್ ತಾಲೂಕು ಉಪಾಧ್ಯಕ್ಷರಾಗಿ, ಪ್ರಶಾಂತ್ ಬಿ. ತಡಸಿ ತಾಲೂಕು ಪ್ರಧಾನ ಕಾರ್ಯದರ್ಶಿಯಾಗಿ, ಗೋಪಾಲ್ ಬಿ. ದ್ಯಾವಣ್ಣವರ ತಾಲೂಕು ಸಂಘಟನೆ ಕಾರ್ಯದರ್ಶಿಯಾಗಿ, ಆನಂದ್ ವೈ. ದೊಡ್ಡಮನಿ ತಾಲೂಕು ಖಜಾಂಚಿಯಾಗಿ ಹಾಗೂ



ಕುಮಾರ್ ಆರ್. ಜೋಗುಣನವರ್ ಮತ್ತು ಪುನೀತ್ ಎಂ. ಜೋಗುಣನವರ್ ತಾಲೂಕು ಸಹಕಾರ್ಯದರ್ಶಿಗಳಾಗಿ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಆದೇಶ ಪತ್ರ ನೀಡಿದ ಬಳಿಕ ಮಾತನಾಡಿದ ಜಿಲ್ಲಾ ನಾಯಕರು, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಪ್ರೊ. ಬಿ. ಕೃಷ್ಣಪ್ಪ ಅವರ ತತ್ವ ಮತ್ತು ಸಿದ್ಧಾಂತಗಳಲ್ಲಿ ನಂಬಿಕೆಯಿಟ್ಟು, ಸಂವಿಧಾನದ ಆಶಯಗಳ ಅನುಷ್ಠಾನಕ್ಕಾಗಿ, ಶೋಷಿತ ಸಮುದಾಯಗಳ ಏಳಿಗೆಗೆ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಪ್ರಮಾಣಿಕವಾಗಿ ಶ್ರಮಿಸಬೇಕು ಎಂದು ನೂತನ ಪದಾಧಿಕಾರಿಗಳಿಗೆ ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಘಟಕದ ಅಧ್ಯಕ್ಷರಾದ ಮಂಜುಳಾ ಕಲಿಕೇರಿ, ಜಿಲ್ಲಾ ಉಪಾಧ್ಯಕ್ಷರಾದ ಪರಸಪ್ಪ ಪೂಜಾರ್, ಶೇಖಪ್ಪ ಮಾದರ್, ಉಮೇಶ್ ಪೂಜಾರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹನುಮಂತ ಪೂಜಾರ್, ಗಜೇಂದ್ರಗಡ ತಾಲೂಕು ಅಧ್ಯಕ್ಷರಾದ ದುರ್ಗೇಶ್ ಹಿರೇಮನಿ, ತಾಲೂಕು ಉಪಾಧ್ಯಕ್ಷರಾದ ಯಲ್ಲಪ್ಪ ಮಾದರ್, ದಲಿತ ಮುಖಂಡರಾದ ಮುತ್ತು ಪೂಜಾರ್, ಚೇತನ್ ಮುದೇನಗುಡಿ, ಮಂಜು ಬಡಿಗೇರ್, ದತ್ತು ಜೋಗುಣನವರ್, ಗುರುನಾಥ್ ಕೆಂಗಾರ್ ಭಾಗವಹಿಸಿದ್ದರು.

# ಸ್ನೇಹ ಎಂದರೆ ಇದೇ...! ನಾಲ್ಕು ದಶಕಗಳ ಒಡನಾಟ ಫ್ರೆಂಡ್‌ಶಿಪ್ ಡೇ ವಿಶೇಷ

ಹಂಪಾಪಟ್ಟಣ: ಇಂದಿನ ವೇಗದ ಜೀವನದಲ್ಲಿ ಅನೇಕ ಸಂಬಂಧಗಳು ಕಾಲದೊಂದಿಗೆ ಮರೆಯಾಗುತ್ತವೆ. ಆದರೆ ಬಾಲ್ಯದಲ್ಲಿ ಆರಂಭವಾದ ನಿಜವಾದ ಸ್ನೇಹ ಜೀವನಪೂರ್ತಿ ಉಳಿದರೆ ಅದು ಅಪರೂಪದ ಬಾಂಧವ್ಯವಾಗುತ್ತದೆ. ಹಗರಿಬೊಮ್ಮನಹಳ್ಳಿ ತಾಲೂಕಿನ ಹಂಪಾಪಟ್ಟಣ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದನೇ ತರಗತಿಯಿಂದ ಆರಂಭವಾದ ಗೆಳೆತನ, ನಂತರ ಶ್ರೀ ಚಂದ್ರಮೌಳೇಶ್ವರ ಪ್ರೌಢಶಾಲೆ ಹಾಗೂ ಕಾಲೇಜು ಶಿಕ್ಷಣದವರೆಗೂ ಜೊತೆಯಾಗಿ ಬೆಳೆದು, ಇಂದು ನಾಲ್ಕು ದಶಕಗಳಾದರೂ ಅದೇ ಪ್ರೀತಿ, ವಿಶ್ವಾಸ ಮತ್ತು ಆತ್ಮೀಯತೆಯೊಂದಿಗೆ ಮುಂದುವರಿದಿದೆ. ಫ್ರೆಂಡ್‌ಶಿಪ್ ಡೇ ಅಂಗವಾಗಿ ಈ ಗೆಳೆಯರ ಬಳಗ ಯುವಜನತೆಗೆ ನಿಜವಾದ ಸ್ನೇಹದ ಮೌಲ್ಯವನ್ನು ಸಾರುತ್ತಿದೆ.

ಈ ಸ್ನೇಹದ ಪಯಣ ಹಂಪಾಪಟ್ಟಣ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರಂಭವಾಯಿತು. ಅಕ್ಷರಾಭ್ಯಾಸದ ಜೊತೆಗೆ ಆರಂಭವಾದ ಪರಿಚಯ ಕ್ರಮೇಣ ಆತ್ಮೀಯ ಸ್ನೇಹವಾಗಿ ರೂಪುಗೊಂಡಿತು. ಶಾಲೆಯ ದಿನಗಳಲ್ಲಿ ಒಂದೇ ಬೆಂಚಿನಲ್ಲಿ ಕುಳಿತು ಪಾಠ ಕೇಳುವುದು, ಆಟವಾಡುವುದು, ಮಧ್ಯಾಹ್ನದ ಊಟವನ್ನು ಹಂಚಿಕೊಂಡು ತಿನ್ನುವುದು, ಶಿಕ್ಷಕರ ಮಾರ್ಗದರ್ಶನದಲ್ಲಿ ಕಲಿಯುವುದು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಹಾಗೂ ಶಾಲೆಯ ಪ್ರತಿಯೊಂದು ಚಟುವಟಿಕೆಯಲ್ಲಿ ಒಟ್ಟಾಗಿ ಪಾಲ್ಗೊಳ್ಳುವುದು ಇವರ ದೈನಂದಿನ ಜೀವನದ ಭಾಗವಾಗಿತ್ತು.

ಹಂಪಾಪಟ್ಟಣ ಮಾತ್ರವಲ್ಲದೆ ಸುತ್ತಮುತ್ತಲಿನ ಹಲವು ಗ್ರಾಮಗಳಿಂದ ಬಂದ ವಿದ್ಯಾರ್ಥಿಗಳು ಈ ಬಳಗದಲ್ಲಿದ್ದರು. ಕೆಲವರು ಪ್ರತಿದಿನ ದೂರದ ಊರುಗಳಿಂದ ಶಾಲೆಗೆ ಬರುತ್ತಿದ್ದ–ರೆ, ಇನ್ನೂ ಕೆಲವರು ತಗ್ಗಿನಮಠದ ಹಾಸ್ಟೆಲ್‌ನಲ್ಲಿ ಉಳಿದು ವಿದ್ಯಾಭ್ಯಾಸ ಮಾಡುತ್ತಿದ್ದರು. ಊರುಗಳು ಬೇರೆಬೇರೆಯಾದರೂ ಸ್ನೇಹದ ಬಾಂಧವ್ಯ ಮಾತ್ರ ಒಂದೇ ಆಗಿತ್ತು. ಓದಿನಲ್ಲಿ ಪರಸ್ಪರ ಸಹಾಯ ಮಾಡುವುದು, ಕಷ್ಟದಲ್ಲಿದ್ದ ಸ್ನೇಹಿತನಿಗೆ ಧೈರ್ಯ ಹೇಳುವುದು, ಸಂತೋಷದ ಕ್ಷಣಗಳನ್ನು ಹಂಚಿಕೊಳ್ಳುವುದು ಇವರ ಸ್ವಭಾವವಾಗಿತ್ತು.

ಪ್ರಾಥಮಿಕ ಶಿಕ್ಷಣದ ನಂತರ ಎಲ್ಲರೂ ಚಂದ್ರಮೌಳೇಶ್ವರ ಪ್ರೌಢಶಾಲೆಯಲ್ಲಿ ವ್ಯಾಸಂಗ ಮುಂದುವರಿಸಿದರು. ಏಳನೇ ತರಗತಿಯ ಪರೀಕ್ಷೆ ಆ ಕಾಲದಲ್ಲಿ ಪ್ರಮುಖ ಹಂತವಾಗಿತ್ತು.



ನಂತರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಸಂದರ್ಭದಲ್ಲಿ ರೈಲ್ವೆ ನಿಲ್ದಾಣದ ಸಮೀಪ ಕೊಠಡಿ ಮಾಡಿಕೊಂಡು ಒಟ್ಟಾಗಿ ಓದಿದ ದಿನಗಳು ಅವರ ಸ್ನೇಹವನ್ನು ಮತ್ತಷ್ಟು ಗಟ್ಟಿಗೊಳಿಸಿತು. ಶಾಲಾ ದಿನಗಳಲ್ಲಿ ವಲಯ ಹಾಗೂ ತಾಲೂಕು ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ, ಗೆಲುವು–ಸೋಲುಗಳನ್ನು ಒಟ್ಟಾಗಿ ಹಂಚಿಕೊಂಡು, ಶಾಲೆಯ ವಾರ್ಷಿಕೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ಈ ಸ್ನೇಹಿತರ ಶಿಕ್ಷಣದ ಪಯಣದಲ್ಲಿ ಎಂ. ಪಾಪಜ ಅಣ್ಣ ಅವರ ಪಾತ್ರವೂ ಮರೆಯಲಾಗದು. ಹೆಚ್ಚು ವಿದ್ಯಾಭ್ಯಾಸ ಮಾಡಿರದಿದ್ದರೂ ಶಿಕ್ಷಣದ ಮಹತ್ವವನ್ನು ಅರಿತಿದ್ದ ಅವರು ವಿದ್ಯಾರ್ಥಿಗಳ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಪ್ರತಿದಿನ ಬೆಳಿಗ್ಗೆ ಸುಮಾರು ನಾಲ್ಕು ಗಂಟೆಗೆ ಎಲ್ಲ ವಿದ್ಯಾರ್ಥಿಗಳನ್ನು ಎಬ್ಬಿಸಿ ಓದಲು ಪ್ರೇರೇಪಿಸುತ್ತಿದ್ದರು. ಆ ಸಮಯದಲ್ಲಿ ವಿದ್ಯುತ್ ಸೌಲಭ್ಯ ಸಮರ್ಪಕವಾಗಿರದ ಕಾರಣ ಬೆಳಕಿನ ವ್ಯವಸ್ಥೆ ಮಾಡಿ ವಿದ್ಯಾರ್ಥಿಗಳು ನೆಮ್ಮದಿಯಿಂದ ಓದುವಂತೆ ನೋಡಿಕೊಳ್ಳುತ್ತಿದ್ದರು. ಪರೀಕ್ಷೆಗಳ ಸಮಯದಲ್ಲಿ ಎಲ್ಲ ಸ್ನೇಹಿತರು ಪರೀಕ್ಷಾ ಕೇಂದ್ರಕ್ಕೆ ಸಮಯಕ್ಕೆ ಸರಿಯಾಗಿ ತಲುಪುವಂತೆ ಸೈಕಲ್‌ನಲ್ಲಿ ಜೊತೆಯಾಗಿ ಕರೆದುಕೊಂಡು ಹೋಗುವುದು, ಅಗತ್ಯ ನೆರವು ನೀಡುವುದು ಹಾಗೂ ಧೈರ್ಯ ತುಂಬುವುದು ಅವರ ಸೇವಾಭಾವವನ್ನು ತೋರಿಸುತ್ತದೆ. ವಿದ್ಯಾರ್ಥಿಗಳ ಯಶಸ್ಸನ್ನು ತಮ್ಮದೇ ಯಶಸ್ಸೆಂದು ಭಾವಿಸಿದ್ದ ಎಂ. ಪಾಪಜ ಅಣ್ಣ ಅವರನ್ನು ಈ ಸ್ನೇಹಿತರ ಬಳಗ ಇಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತದೆ.

ಕಾಲಕ್ರಮೇಣ ಕಾಲೇಜು ಶಿಕ್ಷಣವೂ ಮುಗಿಯಿತು. ನಂತರ ಪ್ರತಿಯೊಬ್ಬರೂ ಕೃಷಿ, ಉದ್ಯೋಗ, ವ್ಯಾಪಾರ ಹಾಗೂ ವಿವಿಧ ವೃತ್ತಿಗಳಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡರು. ಮದುವೆ, ಕುಟುಂಬ ಹಾಗೂ ಕೆಲಸದ ಜವಾಬ್ದಾರಿಗಳು ಹೆಚ್ಚಾದರೂ ಬಾಲ್ಯದ ಸ್ನೇಹವನ್ನು ಯಾರೂ ಮರೆಯಲಿಲ್ಲ. ಪ್ರತಿ ವರ್ಷ ಕನಿಷ್ಠ ಒಂದು ಬಾರಿ ಎಲ್ಲರೂ ಸೇರಿ ಹಳೆಯ ನೆನಪುಗಳನ್ನು ಮೆಲುಕು ಹಾಕುವುದು ಈ ಬಳಗದ ವಿಶೇಷವಾಗಿದೆ. ಇತ್ತೀಚಿನ ದಿನಗಳಲ್ಲಿ ವಾಟ್ಸಾಪ್, ವಿಡಿಯೋ ಕರೆ ಹಾಗೂ ಮೊಬೈಲ್ ಸಂಪರ್ಕದ ಮೂಲಕ ನಿರಂತರ ಸಂಪರ್ಕದಲ್ಲಿದ್ದು, ಜಾತ್ರೆ, ಹಬ್ಬ–ಹರಿದಿನಗಳು, ಸ್ನೇಹಿತರ ಮದುವೆಗಳು, ಅವರ ಮಕ್ಕಳ ಮದುವೆಗಳು ಹಾಗೂ ಕುಟುಂಬದ ಶುಭ ಸಮಾರಂಭಗಳಲ್ಲಿ ಒಂದಾಗಿ ಸೇರಿ ಸ್ನೇಹದ ಬಾಂಧವ್ಯವನ್ನು ಜೀವಂತವಾಗಿರಿಸಿದ್ದಾರೆ.

ಈ ಅಪೂರ್ವ ಸ್ನೇಹದ ಬಳಗದಲ್ಲಿ , ಕನಕಪ್ಪ, , ಎಚ್.ಡಿ. ಪರಶುರಾಮ,, ಉಮಾಪತಿ ನಾಯಕ್, ಚಂದ್ರ ನಾಯಕ್, ಎ. ಮಂಜು, ಮಂಜುನಾಥ್ (ಚಳ್ಳಿಕೆರೆ), ಪ್ರಶಾಂತ್, ಎ. ಕೇಶವಮೂರ್ತಿ, ಗುಳೇದಾಳ್ ಕೃಷ್ಣ, ಮರಿಯಪ್ಪ, ಕೇಶರಾಯನ ಬಂಡಿ ಸೋಮ, ಮಲ್ಲಿಕಾರ್ಜುನ, ನಾಗರಾಜ್, ರುದ್ರೇಶ್ . ಲೋಕೇಶ್ ನಾಯಕ. ಮಹಮ್ಮದ್ ರಫೀಕ.ಹಾಗೂ ಸೇರಿದಂತೆ ಹಲವರು ಇಂದಿಗೂ ಒಂದೇ ಕುಟುಂಬದ ಸದಸ್ಯರಂತೆ ಆತ್ಮೀಯತೆಯಿಂದ ಸಾಗುತ್ತಿದ್ದಾರೆ.

ಈ ಸ್ನೇಹಿತರಲ್ಲಿ ಕೆ. ಎಸ್. ಹುಲುಗಪ್ಪ ಸಹಕಾರ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ನಿಂಗರಾಜ ಗ್ರಾಮ ಪಂಚಾಯಿತಿಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಮೇಶ್ ಫೈನಾನ್ಸ್ ಬ್ಯಾಂಕ್‌ನಲ್ಲಿ ವ್ಯವಸ್ಥಾಪಕರಾಗಿ, ಸಂತೋಷ್ ನಾಯಕ ಬ್ಯಾಂಕ್ ವ್ಯವಸ್ಥಾಪಕರಾಗಿ ಹುಲಿಗೇಶ್ ಶಿಕ್ಷಕರಾಗಿ. ವಿ ಹನುಮಂತ. ಖಾಸಗಿ ಕಾರ್ಖಾನೆಯಲ್ಲಿ ಕೆಲಸ ಮಾಡ್ತಾ ಇದ್ದಾನೆ. ಹೊಸಳ್ಳಿ ಹೇಮಂತ್ . ಕೆ ಎಸ್ ಆರ್ ಟಿ ಸಿ . ಇಲಾಖೆ ಹಾಗೂ ಅರುಣ್ ಕುಮಾರ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇತರ ಸ್ನೇಹಿತರು ಕೃಷಿ, ಉದ್ಯೋಗ, ವ್ಯಾಪಾರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಬದುಕನ್ನು ಯಶಸ್ವಿಯಾಗಿ ಕಟ್ಟಿಕೊಂಡಿದ್ದಾರೆ.

ಈ ಸ್ನೇಹದ ಪಯಣದಲ್ಲಿ ಕೆಲವರು ಇಂದು ನಮ್ಮೊಂದಿಗಿಲ್ಲ. ಜಗದೀಶ್, ಗುಳೆದಾಳ್ ತೋಟಪ್ಪ, ಕಟ್ಟೆವಲ್ಲ ತಾಂಡದ ಕೃಷ್ಣ ನಾಯಕ್ ಹಾಗೂ ಎಚ್.ಕೆ. ಸೋಮು ಅವರು ವಿಧಿವಶರಾಗಿದ್ದು, ಅವರ ಅಗಲಿಕೆ ಈ ಸ್ನೇಹಿತರ ಬಳಗಕ್ಕೆ ತುಂಬಲಾರದ ನಷ್ಟವಾಗಿದೆ. ಪ್ರತಿಯೊಂದು ಸ್ನೇಹಿತರ ಸಂಗಮದಲ್ಲೂ ಅವರನ್ನು ಆತ್ಮೀಯವಾಗಿ ಸ್ಮರಿಸಿ ಗೌರವ ನಮನ ಸಲ್ಲಿಸುವ ಮೂಲಕ ಅವರ ನೆನಪುಗಳನ್ನು ಚಿರಸ್ಥಾಯಿಯಾಗಿ ಉಳಿಸಿಕೊಳ್ಳುತ್ತಿದ್ದಾರೆ.

ಫ್ರೆಂಡ್‌ಶಿಪ್ ಡೇ ಕೇವಲ ಶುಭಾಶಯ ಹೇಳುವ ದಿನವಲ್ಲ; ಅದು ಸ್ನೇಹದ ಮೌಲ್ಯವನ್ನು ನೆನಪಿಸಿಕೊಳ್ಳುವ ದಿನ. ಹಂಪಾಪಟ್ಟಣದ ಈ ಗೆಳೆಯರ ಬಳಗ ಕಳೆದ ನಾಲ್ಕು ದಶಕಗಳಿಂದ ಪ್ರೀತಿ, ವಿಶ್ವಾಸ, ತ್ಯಾಗ ಹಾಗೂ ಪರಸ್ಪರ ಗೌರವದೊಂದಿಗೆ ತಮ್ಮ ಸ್ನೇಹವನ್ನು ಉಳಿಸಿಕೊಂಡು ಬಂದಿದೆ.

"ನಿಜವಾದ ಸ್ನೇಹವು ಸಮಯ, ದೂರ ಮತ್ತು ಪರಿಸ್ಥಿತಿಗಳಿಂದ ಎಂದಿಗೂ ಬದಲಾಗುವುದಿಲ್ಲ. ಬದುಕಿನ ಪ್ರತಿಯೊಂದು ಹೆಜ್ಜೆಯಲ್ಲೂ ಜೊತೆಯಾಗಿರುವುದೇ ನಿಜವಾದ ಸ್ನೇಹ." ಎಂಬ ಸಂದೇಶವನ್ನು ಈ ಗೆಳೆಯರ ಬದುಕು ಸಾರುತ್ತಿದೆ. ನಾಲ್ಕು ದಶಕಗಳ ಕಾಲ ಅಚಲವಾಗಿ ಉಳಿದಿರುವ ಈ ಸ್ನೇಹದ ಪಯಣ ಹಂಪಾಪಟ್ಟಣಕ್ಕೆ ಹೆಮ್ಮೆಯಾಗಿದ್ದು, ಇಂದಿನ ಯುವಜನತೆಗೆ ಪ್ರೇರಣೆಯಾಗಿದೆ.

**ಎ ಕೇಶವಮೂರ್ತಿ**
**ಹಂಪಾಪಟ್ಟಣ**

# ಹಕ್ಕುಪತ್ರ ವಿತರಣೆ ಮಾಡದಿರುವ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಪತ್ರ



ಕೊಟ್ಟೂರು : ಮಾನ್ಯ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ ಕಾರ್ಯಾಲಯ ಕೊಟ್ಟೂರು ಸುಮಾರು ವರ್ಷಗಳಿಂದ ಬೇಸತ್ತು ಹೋಗಿರುವ ಬಾಲಾಜಿ ಕನ್ಸ್ ಸ್ಟೇಷನ್ ಮುಂಭಾಗದಲ್ಲಿ ಸಲ್ಲಿಸಲಾಯಿತು ದಲಿತ ಕಾಲೋನಿಯಲ್ಲಿ ವಾಸಸುತ್ತಿರುವ ದೇವದಾಸಿ ಮಹಿಳೆಯರು ಹಾಗೂ ಇತರ ಮಹಿಳೆಯರಿಗೆ ಹಕ್ಕು ಪತ್ರ ಪಟ್ಟ ಮತ್ತು ಅದರ ಜೊತೆಗೆ ಫಾರಂ ನಂ 3 ನೀಡುವಲ್ಲಿ ಮೂರು ವರ್ಷಗಳಿಂದ ಆಗಿರುವ ವಿಳಂಬವನ್ನು ಖಂಡಿಸಿ 04/08/ 2026 ರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಳ್ಳುವ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡಲು ಮುಂದಾದರು

ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳಾದ ನಾವು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ದೇವದಾಸಿ ಮಹಿಳೆಯರು ಹಾಗೂ ಆರ್ಥಿಕವಾಗಿ ಹಿಂದುಳಿದ ಬಡ ಕುಟುಂಬಗಳ ಸದಸ್ಯರು ಕಳೆದ 35 ರಿಂದ 40 ವರ್ಷದವರೆಗೂ ವಾಸಸುತ್ತಿರುವ ಮನೆಗಳಿಗೆ ಹಕ್ಕು ಪತ್ರ ಮತ್ತು ಅದರ ಜೊತೆಗೆ ಫಾರಂ ನಂ 3 ನೀಡುವಂತೆ ಸುಮಾರು ವರ್ಷಗಳಿಂದ ಪಟ್ಟಣ ಪಂಚಾಯಿತಿಗೆ ಹಲೆದಾಡಿ ಸಾಕಾಗಿ ಹೋಗಿದೆ

2023 ರಲ್ಲಿ ತಾಲೂಕು ಕಚೇರಿಯ ಮುಂಭಾಗದಲ್ಲಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ನಡೆಸಿದ್ದೆವು ಅವತ್ತಿನ ಸಂದರ್ಭದಲ್ಲಿ ಮಾನ್ಯ ಉಪ ವಿಭಾಗಾಅಧಿಕಾರಿಗಳು ಹಾಗೂ ಪಟ್ಟಣ ಪಂಚಾಯಿತಿಯ ಅಧಿಕಾರಿಗಳು ನಿಮ್ಮ ಬೇಡಿಕೆಗೆ 15 ದಿನಗಳ ಒಳಗಾಗಿ ಸಮಸ್ಯೆ ಪರಿಹರಿಸಿ ಬಗೆಹರಿಸಿ ಕೊಡುವುದಾಗಿ ಭರವಸೆ ಕೊಟ್ಟಿದ್ದರು ಹಕ್ಕುಪತ್ರ ಹಾಗೂ ಫಾರಂ ನಂ 3 ನೀಡಲಾಗುವುದು ಎಂದು ಲಿಖಿತ ಭರವಸೆಯನ್ನು ನೀಡಿದ್ದರು ಆದರೆ 2023 ರಿಂದ 2026 ವರೆಗೆ ನಿರಂತರವಾಗಿ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಪಟ್ಟಣ ಪಂಚಾಯಿತಿ ಕಚೇರಿಗಳಿಗೆ ಅಲೆದಾಡಿದರು ಯಾವುದೇ ಪ್ರಯೋಜನ ವಾಗಿಲ್ಲ ಎಂದು ದಲಿತರು ಬೇಸರ ವ್ಯಕ್ತಪಡಿಸಿದರು

ಇಲ್ಲಿ ವಾಸಸುತ್ತಿರುವ ಬಡ ಮಹಿಳೆಯರು ದೇವದಾಸಿಯರು ಅದರ ಜೊತೆಗೆ ಅನ್ಯ ಕುಟುಂಬದವರು ಹಾಗೂ ಸಾಮಾಜಿಕವಾಗಿ ದುರ್ಬಲ ವರ್ಗಗಳು ಹಕ್ಕುಗಳನ್ನು ಗಮನಿಸಿದರೆ ಅಧಿಕಾರಿಗಳು ಬಹಳ ನಿರ್ಲಕ್ಷ ವಹಿಸಿದ್ದಾರೆ ಎಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ 35 ರಿಂದ 40 ವರ್ಷಗಳ ಕಾಲ ವಾಸಸುತ್ತಿರುವ ಕುಟುಂಬಗಳನ್ನು ಅನಿಸ್ಥಿತಿಯಲ್ಲಿ ಇರಿಸುವುದು ಸಾಮಾಜಿಕ ನ್ಯಾಯದ ಮೂಲ ತತ್ವಗಳಿಗೆ ವಿರುದ್ಧವಾಗಿದೆ ಆದ್ದರಿಂದ ಈ ಮೂಲಕ ಸರ್ಕಾರದ ಅನ್ಯಾಯದ ಹಾಗೂ ಆಡಳಿತಾತ್ಮಕ ವಿಳಂಬವನ್ನು ಖಂಡಿಸಿ 04/08/2026 ರಂದು ಪಟ್ಟಣ ಪಂಚಾಯಿತಿ ಮುಂಭಾಗದಲ್ಲಿ ಶಾಂತಿಯುತ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲು ನಿರ್ಧರಿಸಿದ್ದೇವೆ ನಮ್ಮ ಪ್ರಮುಖ ಬೇಡಿಕೆಗಳು ಈಡೇರಿಯವರೆಗೂ ನಾವು ಜಾಗ ಬಿಟ್ಟು ಹಿಂದೆ ಸರಿಯೋದಿಲ್ಲ ಎಂದರು.

# ಗ್ರಾಮ ಪಂಚಾಯಿತಿ ಜಾಗವನ್ನು ಒತ್ತುವರಿ ತೆರವುಗೊಳಿಸಿದ ಕಾರ್ಯನಿರ್ವಾಹಕ ಅಧಿಕಾರಿಗಳು



ಕುಣಿಗಲ್ : ತಾಲೂಕಿನ ಕಗ್ಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಟಿಗೆಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿಗೆ ಸೇರಿದ ಜಾಗದ ಮೇಲಿನ ಒತ್ತುವರಿಯನ್ನು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ತೆರವುಗೊಳಿಸಲಾಯಿತು.

ಸಾರ್ವಜನಿಕ ಆಸ್ತಿಯನ್ನು ಸಂರಕ್ಷಿಸುವ ಉದ್ದೇಶದಿಂದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಪಂಚಾಯಿತಿಗೆ ಸೇರಿದ ಜಾಗವನ್ನು ಒತ್ತುವರಿಯಿಂದ ಮುಕ್ತಗೊಳಿಸಿದರು.

ಗ್ರಾಮ ಪಂಚಾಯಿತಿಯ ಆಸ್ತಿಗಳನ್ನು ಸಂರಕ್ಷಿಸುವುದು ಹಾಗೂ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಸರ್ಕಾರಿ ಮತ್ತು ಪಂಚಾಯಿತಿ ಆಸ್ತಿಗಳ ಮೇಲೆ ಅನಧಿಕೃತ ಒತ್ತುವರಿಗೆ ಅವಕಾಶ ನೀಡುವುದಿಲ್ಲ ಎಂದು ಈ ವೇಳೆ ತಿಳಿಸಲಾಯಿತು.

ಮತ್ತು ಇದೇ ರೀತಿ 36 ಗ್ರಾಮಪಂಚಾಯಿತಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಕಠಿಣ ಕ್ರಮಕಗೊಂಡು ಎಲ್ಲೆಲ್ಲಿ ಸರ್ಕಾರಿ ಜಾಗ ಇದೆಯೋ ಅವನ್ನೆಲ್ಲ ತೆರವುಗಳಿಸದರೆ ಆ ಜಾಗದಲ್ಲಿ ಗ್ರಂಥಾಲಯ ಇಲ್ಲ ಅಂಗನವಾಡಿ ಮತ್ತು ಜನರಿಗೆ ಅನುಕೂಲವಾಗುವ ಯಾವುದಾದರು ಸರ್ಕಾರಿ ಕಛೇರಿ ಗಳನ್ನು ಮಾಡಿ ಅನುಕೂಲ ಮಾಡಿಕಟ್ಟರೆ ಜನಸಮಾನ್ಯರಿಗೂ ಅನುಕೂಲವಾಗುತ್ತದೆ ಇನ್ನಾದರೂ ಅಧಿಕಾರಿಗಳು ಇತರ ದಿಟ್ಟ ನಿರ್ಧಾರ ತೆಗೆದುಕೊಂಡರೆ ಜನರಿಗೆ ಅನುಕೂಲ ಆಗುತ್ತದೆ ಎಂದು ಜನರ ಅಭಿಪ್ರಾಯ

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಂಬಂಧಿತ ಅಧಿಕಾರಿಗಳು ಉಪಸ್ಥಿತರಿದ್ದರು.

# ಕುಣಿ ಅಗೆಯಲು ನಿರಾಕರಣೆ: ದಲಿತರ ಮೇಲೆ ಹಲ್ಲೆ, ಗ್ರಾಮ ಬಹಿಷ್ಕಾರದ ಬೆದರಿಕೆ ಆರೋಪ



ಯಾದಗಿರಿ: ಸುರಪುರ ತಾಲೂಕಿನ ಶಖಾಪುರ ಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆಗಾಗಿ ಕುಣಿ (ಸಮಾಧಿ) ಅಗೆಯುವ ಕಾಯಕ ನಿರ್ವಹಿಸಲು ನಿರಾಕರಿಸಿದ್ದಕ್ಕೆ ದಲಿತ ಸಮುದಾಯದವರ ಮೇಲೆ ಹಲ್ಲೆ ನಡೆಸಿ, ಗ್ರಾಮದಿಂದ ಬಹಿಷ್ಕಾರ ಹಾಕುವುದಾಗಿ ಬೆದರಿಕೆ ಹಾಕಲಾಗಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಗ್ರಾಮದಲ್ಲಿ ನಾಲ್ಕು ದಿನಗಳ ಹಿಂದೆ ಮೇಲ್ವರ್ಗದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಸಂಪ್ರದಾಯದಂತೆ ಅಂತ್ಯಕ್ರಿಯೆಗೆ ಕುಣಿ ಅಗೆಯಲು ದಲಿತ ಸಮುದಾಯದ ಕೆಲವರನ್ನು ಕರೆಯಲಾಗಿತ್ತು ಎನ್ನಲಾಗಿದೆ.

ಆದರೆ, ಈ ಕಾಯಕವನ್ನು ಇನ್ನು ಮುಂದೆ ಮಾಡುವುದಿಲ್ಲ ಎಂದು ದಲಿತ ಸಮುದಾಯದವರು ನಿರಾಕರಿಸಿದ್ದಕ್ಕೆ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ.

ದಲಿತ ಸಮುದಾಯದವರ ಪ್ರಕಾರ, "ಗ್ರಾಮದಲ್ಲಿ ಯಾರೇ ಮೃತಪಟ್ಟರೂ ನೀವು ಕುಣಿ ಅಗೆಯಲೇಬೇಕು. ಇಲ್ಲದಿದ್ದರೆ ಗ್ರಾಮದಲ್ಲಿ ಇರಲು ಅವಕಾಶ ನೀಡುವುದಿಲ್ಲ. ನಮ್ಮ ಮಾತು ಕೇಳದಿದ್ದರೆ ಸಾಮಾಜಿಕ ಬಹಿಷ್ಕಾರ ಹಾಕುತ್ತೇವೆ" ಎಂದು ಕೆಲವರು ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ.

# ಠಾಣೆಯಲ್ಲಿ ಮೃತಪಟ್ಟ ಯುವಕ ಲಾಕ್‌ಅಪ್ ಡೆತ್ ಆರೋಪ

ಹಗರಿಬೊಮ್ಮನಹಳ್ಳಿ: ಕುಟುಂಬ ಕಲಹದ ಹಿನ್ನೆಲೆ ಆ.1ರ ಶನಿವಾರ ತಡರಾತ್ರಿ ಪೊಲೀಸ್ ಠಾಣೆಗೆ ಕರೆತಂದಿದ್ದ ಜಾಲಿನಗರ ನಿವಾಸಿ ಖಲೀಲ್ (36) ಎಂಬ ಯುವಕ ಠಾಣೆಯಲ್ಲೇ ಅನುಮಾನಾಸ್ಪದವಾಗಿ ಮೃತಪಟ್ಟ ಘಟನೆ ನಡೆದಿದೆ. ಪೊಲೀಸರ ಮಾನಸಿಕ ಹಾಗೂ ದೈಹಿಕ ಕಿರುಕುಳದಿಂದಲೇ ಯುವಕ ಮೃತಪಟ್ಟಿದ್ದಾನೆ ಎಂದು ಕುಟುಂಬಸ್ಥರು ಲಾಕಪ್ ಡೆತ್ ಆರೋಪ ಮಾಡಿದ್ದಾರೆ.

ಖಲೀಲ್ ತನ್ನ ಪತ್ನಿಯ ಜೊತೆ ಜಗಳವಾಡುತ್ತಿದ್ದ ಹಿನ್ನೆಲೆ, ಪತ್ನಿ 112 ತುರ್ತು ಸಹಾಯವಾಣಿಗೆ ದೂರು ನೀಡಿದ್ದರು.



ಸ್ಥಳಕ್ಕೆ ಆಗಮಿಸಿದ 112 ಸಿಬ್ಬಂದಿ ಖಲೀಲ್‌ನನ್ನು ಠಾಣೆಗೆ ಕರೆತಂದು ಒಪ್ಪಿಸಿದ್ದರು. ಈ ವೇಳೆ ಠಾಣೆಯಲ್ಲಿ ಮಾನಸಿಕ ಹಾಗೂ ದೈಹಿಕವಾಗಿ ತೀವ್ರ ಕಿರುಕುಳ ನೀಡಲಾಗಿದೆ.

ಈ ಕಿರುಕುಳ ತಾಳಲಾರದೆ ಖಲೀಲ್ ಠಾಣೆಯಲ್ಲೇ ಜೀವ ಬಿಟ್ಟಿದ್ದಾರೆ ಎನ್ನಲಾಗಿದೆ. ಕೂಡಲೇ ಎಚ್ಚೆತ್ತ ಪೊಲೀಸ್ ಸಿಬ್ಬಂದಿ ಬೆಳಗಿನ ಜಾವ ಸುಮಾರು 3 ಗಂಟೆಯ ವೇಳೆಗೆ ಆಟೋದಲ್ಲಿ ಯುವಕನನ್ನು ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಕರೆತಂದಿದ್ದಾರೆ. ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾನ್ಹವಿ, ಡಿವೈಎಸ್ಪಿ ಮಲ್ಲೇಶ ದೊಡ್ಡಮನಿ, ಸಿಪಿಐ ವಿಕಾಸ್ ಲಮಾಣಿ ಹಾಗೂ ಕೊಟ್ಟೂರು ಸಿಪಿಐ ಸೇರಿದಂತೆ ಹಿರಿಯ ಅಧಿಕಾರಿಗಳು ಮತ್ತು 2 ಡಿಎಆರ್ ವಾಹನಗಳು ಆಸ್ಪತ್ರೆ ಆವರಣದಲ್ಲಿ ಮೊಕ್ಕಾಂ ಹೂಡಿವೆ. ರಾತ್ರಿ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿಯನ್ನು ಎಸ್‌ಪಿ ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ತಿಳಿದುಬಂದಿದೆ. ಸ್ಥಳೀಯ ಸಾರ್ವಜನಿಕರು ಆಸ್ಪತ್ರೆ ಮುಂಭಾಗ ಜಮಾಯಿಸಿದ್ದರಿಂದ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಭಾರಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

# ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ವಿರುದ್ಧ ಕ್ರಮಕ್ಕೆ ಇಕ್ಬಾಲ್ ಅಹಮದ್ ಆಗ್ರಹ



ತುಮಕೂರು : ನೀಟ್ ಹಗರಣ ಖಂಡಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳಿಗೆ ಬೆಂಬಲ ವ್ಯಕ್ತಪಡಿಸಿ, ಲೋಕಸಭೆಯ ವಿರೋಧ ಪಕ್ಷದ ನಾಯಕರಾಗಿರುವ ರಾಹುಲ್‌ಗಾಂಧಿ ಅವರ ಬಗ್ಗೆ ಅವಹೇಳನ ಕಾರಿಯಾಗಿ ಮಾತನಾಡಿರುವ ಉಡುಪಿ ಶಾಸಕ ಯಶ್ಪಾಲ್ ಸುವರ್ಣ ಅವರ ನಡೆ ಖಂಡನೀಯ. ಸರಕಾರ ಕೂಡಲೇ ಅವರ ವಿರುದ್ದ ಕಾನೂನು ಕ್ರಮ ಜರುಗಿಸಬೇಕು ಎಂದು ತುಮಕೂರು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಇಕ್ಬಾಲ್ ಅಹಮದ್ ಒತ್ತಾಯಿಸಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ವಿರೋಧಪಕ್ಷದ ನಾಯಕನಿಗೆ ಸಂವಿಧಾನದ ಅಡಿಯಲ್ಲಿ ಅದರದ್ದೇ ಘನತೆ,ಗೌರವವಿದೆ.ಅದನ್ನು ಮರೆತು, 1992ರಲ್ಲಿ ಬಾಬರಿ ಮಸೀದಿ ದ್ವಂಸ ಮಾಡಿದಂತೆ, ನಿಮ್ಮ ಕುಟುಂಬವನ್ನು ದ್ವಂಸ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುವುದು ಜನಪ್ರತಿನಿಧಿಯಾಗಿರುವ ಅವರಿಗೆ ಶೋಭೆ ತರುವಂತಹದ್ದಲ್ಲ. ಹಾಗಾಗಿ ಇಂದು ಅವರ ವಿರುದ್ದ ಕಾನೂನು ಕ್ರಮಕ್ಕೆ ಆಗಹಿಸಿ ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ. ಸರಕಾರ ಅವರ ವಿರುದ್ದ ದ್ವೇಷ ಭಾಷಣ ತಡೆ ಕಾಯ್ದೆ ಅನ್ವಯ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

# ಅಯ್ಯಪ್ಪ ಸ್ವಾಮಿ ದೇಗುಲ ನಿರ್ಮಾಣ ಕಾಮಗಾರಿ ಪರಿಶೀಲನೆ : ಶಾಸಕ ಶರಣಗೌಡ ಕಂದಕೂರ



ಯಾದಗಿರಿ: ತಾಲೂಕಿನ ಸೈದಾಪುರ ಹೊರ ವಲಯದಲ್ಲಿನ ನಿರ್ಮಾಣ ಹಂತದಲ್ಲಿನ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಕಾಮಗಾರಿಯನ್ನು ಗುರಮಠಕಲ್ ಶಾಸಕ ಶರಣಗೌಡ ಕಂದಕೂರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈಗಾಗಲೇ ಕಾಮಗಾರಿ ಆರಂಭಗೊಂಡು ಒಂದು ವರ್ಷ ಸಮೀಪಿಸುತ್ತಿದ್ದು, ಸರ್ಕಾರದಿಂದ ಇದುವರೆಗೂ 36 ಲಕ್ಷ ರೂ.ಅನುದಾನ ಬಿಡುಗಡೆಗೊಳಿಸಲಾಗಿದೆ. ಭೂಸೇನಾ ನಿಗಮದ ಅಧಿಕಾರಿಗಳು ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು. ಅಲ್ಲದೆ, ಹೆಚ್ಚುವರಿ ಅನುದಾನ ಬಿಡುಗಡೆಗೆ ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಈ ಭಾಗದಲ್ಲಿ ಅಯ್ಯಪ್ಪ ಸ್ವಾಮಿ ದೇವಸ್ಥಾನ ನಿರ್ಮಾಣವಾಗಬೇಕು ಎಂಬುದು ಭಕ್ತರ ಬಹು ದಿನದ ಬೇಡಿಕೆಯಾಗಿತ್ತು. ಅದರಂತೆ ಎಲ್ಲರ ಸಹಕಾರದಿಂದ ಕಾಮಗಾರಿ ಆರಂಭವಾಗಿದೆ. ಶೀಘ್ರದಲ್ಲಿ ಕೆಲಸ ಪೂರ್ಣಗೊಳಿಸಲು ಅಧಿಕಾರಿಗಳು ಮುತುವರ್ಜಿ ವಹಿಸಬೇಕು ಎಂದು ಸೂಚನೆ ನೀಡಿದರು.

ನಿಗಮದ ಎಇಇ ಬನ್ನಪ್ಪ ಕೋಮಾರ, ಜೆಇ ಚಂದ್ರಶೇಖರ, ಜೆಡಿಎಸ್ ಜಿಲ್ಲಾಧ್ಯಕ್ಷ ಸುಭಾಶ್ಚಂದ್ರ ಕಟಕಟಿ, ಪ್ರಮುಖರಾದ ರಾಜೇಶ ಉಡುಪಿ, ಮಲ್ಲಿಕಾರ್ಜುನ ಅರುಣಿ, ಅಜಯರಡ್ಡಿ, ಚಂದ್ರುಗೌಡ ಸೈದಾಪುರ ಹಾಗೂ ಅಯ್ಯಪ್ಪ ಸ್ವಾಮಿ ಸಮಿತಿ ಪದಾಧಿಕಾರಿಗಳು ಇದ್ದರು. ನಾನು ಸಹ ಅಯ್ಯಪ್ಪ ಸ್ವಾಮಿಯ ಭಕ್ತನಾಗಿದ್ದು, ದೇವಸಸ್ಥಾನ ಕಾಮಗಾರಿ ಶೇ.50 ರಷ್ಟು ಪೂರ್ಣಗೊಂಡಿದೆ. ತ್ವರಿತವಾಗಿ ಕೆಲಸ ಮುಗಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಗುರಮಠಕಲ್ ಶಾಸಕ ಶರಣಗೌಡ ಕಂದಕೂರು ಹೇಳಿದ್ದಾರೆ.

# ಎಸ್‌ಐಆರ್ ಜಾಗೃತಿ ಅಭಿಯಾನಕ್ಕೆ ಜನಪ್ರತಿನಿಧಿಗಳ ಸಹಕಾರ ಅಗತ್ಯ: ಮುರಳೀಧರ ಹಾಲಪ್ಪ

ಹುಳಿಯಾರು: ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದ್ದು, ಜನಪ್ರತಿನಿಧಿಗಳು ಹಾಗೂ ಮತದಾರರು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಹಾಲಪ್ಪ ಪ್ರತಿಷ್ಠಾನದ ಅಧ್ಯಕ್ಷ ಮುರಳೀಧರ ಹಾಲಪ್ಪ ಹೇಳಿದರು.

ಪಟ್ಟಣದ ರಾಮ್‌ಗೋಪಾಲ್ ಸರ್ಕಲ್ ಬಳಿ ಹಮ್ಮಿಕೊಂಡಿದ್ದ ಎಸ್‌ಐಆರ್ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮತದಾರರ ಹಕ್ಕು ಹಾಗೂ ದಾಖಲೆಗಳ ಸುರಕ್ಷತೆಗೆ ಎಸ್‌ಐಆರ್ ಪ್ರಕ್ರಿಯೆ ಮಹತ್ವದ್ದಾಗಿದೆ. ಸಾರ್ವಜನಿಕರಲ್ಲಿ ಎಸ್‌ಐಆರ್ ಕುರಿತು ಇರುವ ಗೊಂದಲಗಳನ್ನು ನಿವಾರಿಸಲು ವಿವಿಧ ಸಂಘ-ಸಂಸ್ಥೆಗಳ ಸಹಕಾರದೊಂದಿಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದರು.

ಮತದಾರರ ದಾಖಲೆಗಳ ಮ್ಯಾಪಿಂಗ್, ತಿದ್ದುಪಡಿ ಸೇರಿದಂತೆ ತಾಂತ್ರಿಕ ಸಮಸ್ಯೆಗಳಿಗೆ ನೆರವು ನೀಡಲು ಕೆಪಿಸಿಸಿ ವತಿಯಿಂದ ತಾಂತ್ರಿಕ ತಂಡ ಕಾರ್ಯನಿರ್ವಹಿಸುತ್ತಿದ್ದು, ಅಗತ್ಯವಿದ್ದಲ್ಲಿ ಚಿಕ್ಕನಾಯಕನಹಳ್ಳಿ ಕ್ಷೇತ್ರದ ಎಲ್ಲಾ ಹೋಬಳಿಗಳ ಮತದಾರರಿಗೂ ನೆರವು ನೀಡಲಾಗುವುದು ಎಂದು ತಿಳಿಸಿದರು.

ಎಸ್‌ಐಆರ್ ಪ್ರಕ್ರಿಯೆಯನ್ನು ನಿರ್ಲಕ್ಷಿಸುವುದು ಅಥವಾ ತಪ್ಪು ಮಾಹಿತಿ ನೀಡುವುದು ಮುಂದಿನ ದಿನಗಳಲ್ಲಿ ಸಮಸ್ಯೆಗೆ ಕಾರಣವಾಗಬಹುದು. ಆದ್ದರಿಂದ ಪ್ರತಿಯೊಬ್ಬ ಮತದಾರರೂ ಅಗತ್ಯ ದಾಖಲೆಗಳನ್ನು ಪರಿಶೀಲಿಸಿಕೊಂಡು ಪ್ರಕ್ರಿಯೆಯಲ್ಲಿ ಎಚ್ಚರಿಕೆಯಿಂದ ಭಾಗವಹಿಸಬೇಕು ಎಂದು ಮನವಿ ಮಾಡಿದರು.




ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಮಾಜಿ ಶಾಸಕ ಕೆ.ಎಸ್. ಕಿರಣ್ ಕುಮಾರ್, ಮತದಾರರಲ್ಲಿ ಎಸ್‌ಐಆರ್ ಕುರಿತು ಹಲವು ಗೊಂದಲಗಳಿದ್ದು, ಅವುಗಳನ್ನು ನಿವಾರಿಸುವ ಉದ್ದೇಶದಿಂದ ಹಾಲಪ್ಪ ಪ್ರತಿಷ್ಠಾನದ ತಾಂತ್ರಿಕ ತಂಡದ ಸಹಯೋಗದಲ್ಲಿ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕಳೆದ ಒಂದು ತಿಂಗಳಿನಿಂದ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದ್ದು, ಕ್ಷೇತ್ರದ ಎಲ್ಲಾ ಬೂತ್‌ಗಳಲ್ಲಿ ಪಕ್ಷದ ವತಿಯಿಂದ ಬಿಎಲ್‌ಒ-2ಗಳನ್ನು ನೇಮಿಸಲಾಗಿದೆ. ಎಣಿಕೆ ನಮೂನೆಗಳ ವಿತರಣೆ ಪೂರ್ಣಗೊಂಡಿದ್ದು, ಹೆಸರು, ವಿಳಾಸ, ಅಕ್ಷರದೋಷ ಸೇರಿದಂತೆ ದಾಖಲೆಗಳಲ್ಲಿನ ಲೋಪದೋಷಗಳನ್ನು ತಾಂತ್ರಿಕ ತಂಡದ ನೆರವಿನಿಂದ ಸರಿಪಡಿಸಿಕೊಳ್ಳಬಹುದು ಎಂದು ಹೇಳಿದರು.

2002ರ ಮತದಾರರ ಪಟ್ಟಿಗೆ ಸಂಬಂಧಿಸಿದ ದಾಖಲೆಗಳು ಸೇರಿದಂತೆ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ತಜ್ಞರ ತಂಡ ನೆರವು ನೀಡಲಿದೆ. ಮತದಾರರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಎಸ್‌ಐಆರ್ ಪ್ರಕ್ರಿಯೆಯಿಂದ ರಾಜ್ಯದಲ್ಲಿ ಗಣನೀಯ ಸಂಖ್ಯೆಯ ಮತದಾರರ ಹೆಸರುಗಳು ಪಟ್ಟಿಯಿಂದ ಹೊರಗುಳಿಯುವ ಸಾಧ್ಯತೆ ಕುರಿತು ಆತಂಕ ವ್ಯಕ್ತಪಡಿಸಿದ ಅವರು, ಮುಂದಿನ ಚುನಾವಣೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಪ್ರತಿಯೊಬ್ಬ ಮತದಾರರೂ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಚಿಕ್ಕನಾಯಕನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಚಂದ್ರಶೇಖರ್, ಕಾಂಗ್ರೆಸ್ ಮುಖಂಡ ಎಲ್.ಆರ್. ಚಂದ್ರಶೇಖರ್, ಹುಳಿಯಾರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಟಿ. ಚಿಕ್ಕಣ್ಣ, ಪಟ್ಟಣ ಪಂಚಾಯಿತಿ ಸದಸ್ಯರಾದ ಸಿದ್ದಿಕ್, ಜುಬೇರ್, ಚನ್ನಬಸವಯ್ಯ, ಶಿವಶಂಕರ್, ದೇವರಾಜು, ಬಸವರಾಜು,

ನಾಗರಾಜು ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

EDITOR : S VENKATESULU, D.NO.: 4/38, MAIN ROAD, SETTUR, ANANTHAPUR, ANDHRA PRADESH - 515767, PUBLISHER : S VENKATESULU 237, Ward No 22 Talur Road, Lingamma Compund, Bellary, Bellary, Karnataka - 583101. KARNATAKA - 583113.
OWNER : S VENKATESULU D.NO.: 4/38, MAIN ROAD, SETTUR, ANANTHAPUR, ANDHRA PRADESH - 515767. PRINTER: VADDARA DODDA VEERESH, 1ST WARD, NAYAKARA ONI, AGASARA ONI, AT/POST-SOMALAPURA, BELLARY, KARNATAKA - 583101.